† ಶ್ರೀ ಗಂಗಾಧರ ನಾಮೋಷಿ.—On a point of order. ಇದು ಬಹಳ ಮಹತ್ವವಾದ ಪ್ರಶ್ನೆ. ಈ ಠರಾವು ಇದಕ್ಕೂ ಮೊದಲು ಬೇಕಾದಷ್ಟು ಸಲ ಚರ್ಚೆಯಾಗಿದೆ. ಈ ದಿವಸ ನಿರ್ಣಯ ತೆಗೆದುಕೊಳ್ಳಬೇಕು. ಸರ್ಕಾರ ಯಾವುದೋ ನೆಪದಿಂದ ಹೋದಸಲ ಇದೇ ರೀತಿ ಕಡೇ ವೇಳೆಯಲ್ಲಿ ಮುಂದಕ್ಕೆ ಹಾಕಿತ್ತು. ಸ್ಟೀಲ್‌ಪ್ಲಾಂಟ್ ವಿಷಯ ಮಹತ್ವದ್ದು ಇದೆ. ಆದರೂ ಅದಕ್ಕೆ ಹೊಂದಾಣಿಕೆ ತಂದು ಮತ್ತೆ ಈ ನಿರ್ಣಯವನ್ನು ಮುಂದಕ್ಕೆ ಹಾಕಬಾರದು. ಇದರ ಮೇಲೆ ಓಟು ತೆಗೆದುಕೊಳ್ಳಬೇಕು.

Mr. SPEAKER.—There is no point of order in it.

†ಶ್ರೀ ಅಣ್ಣಾರಾವ್ ಗಣಮುಖಿ (ಅಫಜಲ್‌ಪುರ).—ಇದು ಕಡೆಯ ದಿವಸ. ಶ್ರೀಮಾನ್ ದೊಡ್ಡಮೇಟಿಯವರ ರೆಸಲ್ಯೂಷನ್ ಮೇಲೆ ಎಷ್ಟೋ ಅಧಿವೇಶನಗಳಲ್ಲಿ ಚರ್ಚೆ ಆಗಿದೆ. ಸ್ಟೀಲ್‌ಪ್ಲಾಂಟ್ ವಿಷಯ ಚರ್ಚೆಯಾಗಬೇಕು ಎನ್ನುವುದು ಬರೀ ನೆಪ ಮಾತ್ರ ಆಗಿದೆ. ಈ ನಿರ್ಣಯವನ್ನು ಮುಂದಕ್ಕೆ ದೂಡಲಿಕ್ಕೆ ನೆಪವೇ ವಿನಾ ಅದು ಬೋನಾಫೈಡ್ ಇದೆ ಎಂದು ನನಗೆ ಅನಿಸುವುದಿಲ್ಲ. ಇದನ್ನು ಮುಂದಕ್ಕೆ ಖಂಡಿತವಾಗಿಯೂ ಹಾಕಬಾರದು. ಮುಂದಿನ ಹೊಸ ಅಸೆಂಬ್ಲಿಗೆ ಶ್ರೀಮಾನ್ ಅನ್ನದಾನಪ್ಪನವರು ಬರುತ್ತಾರೋ ಇಲ್ಲವೋ ಗೊತ್ತಿಲ್ಲ. ಈಗ ಮಾತನಾಡತಕ್ಕವರು ಯಾರು ಯಾರು ಇದ್ದಾರೋ ಅವರು ಮುಂದೆ ಬರುತ್ತಾರೋ ಇಲ್ಲವೋ ಗೊತ್ತಿಲ್ಲ, ಮುಂದೆ ಬರುವ ಜನರು ಮಾತನಾಡಲಿದ್ದಾರೆ ಎಂದು ಹೇಳುವುದು ಸರಿಯಲ್ಲ; ಆದುದರಿಂದ ಈ ನಿರ್ಣಯವನ್ನು ಸಭೆಯ ಮುಂದೆ ಇಟ್ಟು ಅದರ ಅಭಿಪ್ರಾಯ ತೆಗೆದುಕೊಳ್ಳುವುದು ಸೂಕ್ತ ಎಂದು ಅನಿಸುತ್ತದೆ. ಒಂದೇ ನೆಪದಿಂದ ಇದನ್ನು ಮುಂದೂಡುವುದು ತಪ್ಪು. ಇದರ ಬಗ್ಗೆ ಅಭಿಪ್ರಾಯ ತೆಗೆದುಕೊಳ್ಳಬೇಕೆಂದು ನನ್ನ ಸಲಹೆ.

Mr. SPEAKER.—Time and again I have said let us have peaceful transaction of business today. Let me ascertain the wishes of the House. Shall we adjourn the debate on this Resolution and take up the next item ?

Hon'ble MEMBERS.—Yes.

(*The discussion on the Resolution was adjourned* sine die).

Mr. SPEAKER.—Then we shall take up the Resolution of Sri A. P. Appanna.

RESOLUTION *Re*: LOCATION OF THE FIFTH STEEL PLANT AT HOSPET.

Sri A. P. APPANNA (Virajpet).—I beg to move :

"This Assembly strongly urges on the Government of India that the V Steel Plant be located at Hospet in Mysore State."

Mr. SPEAKER.—Resolution moved :

"This Assembly strongly urges on the Government of India that the V Steel Plant be located at Hospet in Mysore State."

† ಶ್ರೀ ಎ. ಪಿ. ಅಪ್ಪಣ್ಣ.—ಮಾನ್ಯ ಅಧ್ಯಕ್ಷರೇ, ಈಗಾಗಲೇ 5ನೆಯ ಉಕ್ಕಿನ ಕಾರ್ಖಾನೆಯನ್ನು ಎಲ್ಲಿ ಸ್ಥಾಪನೆ ಮಾಡಬೇಕು ಎನ್ನುವ ವಿಚಾರ ಕೇಂದ್ರ ಸರ್ಕಾರದ ಮನಸ್ಸನ್ನು ಕಳವಳಕ್ಕೆ ಈಡು ಮಾಡಿರುವುದರಲ್ಲಿ ಏನೂ ಸಂಶಯವಿಲ್ಲ. ಇಂತಹ ಒಂದು ನಿರ್ಧಾರವನ್ನು ಕೇಂದ್ರ ಸರ್ಕಾರ ಕೈಗೊಳ್ಳುವಂತಹ ಸಂದರ್ಭದಲ್ಲಿ, ಅದರಲ್ಲೂ ಈ ಮೈಸೂರು ರಾಜ್ಯ ವಿಧಾನ ಸಭೆ ಕೊನೆಯ ದಿನವಾದ ಇಂದಿನ ದಿವಸ, ಈ ಒಂದು ನಿರ್ಧಾರವನ್ನು ಈ ಸಭೆಯು ಸರ್ವಾನುಮತದಿಂದ ಪಾಸು ಮಾಡುವುದು ಉಚಿತವಾಗಿ ಕಂಡುಬಂದುದರಿಂದ, ಈ ನಿರ್ಣಯವನ್ನು ಸಭೆಯ ಮುಂದೆ ಇಡಲಾಗಿದೆ.

(ಶ್ರೀ ಎ. ಪಿ. ಅಪ್ಪಣ್ಣ)

ಆಂಧ್ರ ಸರ್ಕಾರವೂ ಅಲ್ಲಿಯ ಜನತೆಯೂ ಈ 5ನೆಯ ಉಕ್ಕಿನ ಕಾರ್ಖಾನೆಯನ್ನು ಆಂಧ್ರದಲ್ಲಿ ನಿರ್ಮಾಣ ಮಾಡಬೇಕು ಎನ್ನತಕ್ಕ ವಿಚಾರದಲ್ಲಿ ಯಾವ ರೀತಿ ಒಂದು ಒತ್ತಾಯವನ್ನು ಕೇಂದ್ರ ಸರ್ಕಾರದ ಮೇಲೆ ತರುತ್ತಾ ಇದೆ ಎನ್ನುವುದು ಈ ಸಭೆಗೆ ಗೊತ್ತಿದೆ, ಅಂತಹ ಒಂದು ಸಂದರ್ಭದಲ್ಲಿ, ಕಡೆಯ ದಿನವಾದಂಥ ಇಂದಿನ ದಿವಸ, ನಾವು ಈ ನಿರ್ಣಯವನ್ನು ಪಾಸು ಮಾಡಿ, ನಮ್ಮ ರಾಜ್ಯ ಸರ್ಕಾರವನ್ನು ಇನ್ನೂ ಬಲಗೊಳ್ಳುವಂತೆ ಮಾಡಿ, ಮುಂದೆ ಐದನೆಯ ಉಕ್ಕಿನ ಕಾರ್ಖಾನೆಯನ್ನು ನಮ್ಮ ಮೈಸೂರು ರಾಜ್ಯದ ಹೊಸಪೇಟೆಯಲ್ಲಿ ಸ್ಥಾಪಿತವಾಗುವ ಒಂದು ನಿರ್ಧಾರವನ್ನು ಕೈಗೊಳ್ಳಬೇಕಾಗಿದೆ. ಕೇಂದ್ರ ಸರ್ಕಾರವೇ ಆಗಲಿ, ಅಥವಾ ಮೈಸೂರು ರಾಜ್ಯ ಸರ್ಕಾರವೇ ಆಗಲಿ, ಮೈಸೂರು ರಾಜ್ಯದಲ್ಲಿರುವಂಥ ಜನತೆ, ಆಂಧ್ರದ ಜನತೆ ಮಾಡಿದಂಥ ಕ್ರಮಗಳನ್ನು ಇಲ್ಲಿ ಕೈಗೊಳ್ಳಲು ಸಾಧ್ಯ ಇಲ್ಲ ಎಂದು ಮನಗಾಣಬಾರದು. ಕೇಂದ್ರ ಸರ್ಕಾರದಲ್ಲಿ ಒಂದು ಭಾವನೆ ಕಂಡುಬರುತ್ತದೆ. ಏನು ಎಂದರೆ, ಯಾವ ಜನತೆ ರೈಲನ್ನು ಸುಡುತ್ತಾ ಇದೆಯೋ, ಯಾವ ಜನತೆ ಪೋಲೀಸ್ ಸ್ಟೇಷನ್‌ಗಳನ್ನು ಸುಡುತ್ತಾ ಇದೆಯೋ, ಯಾವ ಜನತೆ ಸರ್ಕಾರಿ ಸಾಮುಗ್ರಿಗಳನ್ನು ಸುಡುತ್ತಾ ಇದೆಯೋ, ಆ ಜನತೆಯ ಪರವಾಗಿ ವಾಲುವಂತಹ ಒಂದು ಲವಲವಿಕೆ ಕಂಡುಬರುತ್ತಿದೆ. ಮೈಸೂರು ರಾಜ್ಯದಲ್ಲಿರುವ ಜನತೆ ಇಂತಹ ಕಾರ್ಯಗಳನ್ನು ಮಾಡಲಿಕ್ಕೆ ಶಕ್ತಿಹೀನರು ಎನ್ನುವ ಭಾವನೆಯನ್ನು ಇಟ್ಟುಕೊಂಡಿದ್ದರೆ, ಅದು ತಪ್ಪು ಎಂದು ಈ ಸಂದರ್ಭದಲ್ಲಿ ಹೇಳಲಿಚ್ಛಿಸುತ್ತೇನೆ. ಆದರೆ ಮೈಸೂರು ರಾಜ್ಯಕ್ಕೆ ದೊರಕಬೇಕಾದಂಥ ಉಕ್ಕಿನ ಕಾರ್ಖಾನೆಯನ್ನು ಶಾಂತರೀತಿಯಿಂದ, ಶಿಸ್ತಿನಿಂದ, ಘಟನೆಗೆ ಒಳಪಟ್ಟಂಥ ಹೋರಾಟದಿಂದ ಪಡೆಯಬೇಕು ಎನ್ನುವ ಭಾವನೆ ಹೊಂದಿದ್ದೇವೆ. ನಾವು ಶಕ್ತಿಹೀನರು ಎನ್ನುವ ಭಾವನೆ ಕೇಂದ್ರ ಸರ್ಕಾರ ಹೊತ್ತಿದ್ದರೆ, ಅದು ತಪ್ಪು. ಇದನ್ನು ತೋರಿಸಲಿಕ್ಕೆ ನಮ್ಮ ಘನತೆಗೆ ತಕ್ಕಂತೆ ಶಾಂತ ರೀತಿಯಿಂದ ನಮ್ಮ ಒಗ್ಗಟ್ಟನ್ನು ತೋರಿಸಬೇಕೆಂದು ಇವೊತ್ತು ಈ ವಿಧಾನ ಸಭೆಯಲ್ಲಿ ಈ ನಿರ್ಣಯವನ್ನು ತಂದಿರತಕ್ಕದ್ದು. ಹೊಸಪೇಟೆಯಲ್ಲಿ ಉಕ್ಕಿನ ಕಾರ್ಖಾನೆಯಾಗಲಿಕ್ಕೆ ಯಾವ ರೀತಿಯಾದ ಸಹಾಯ ಸಲಕರಣೆಗಳಿವೆ ಎನ್ನುವ ವಿವರಗಳನ್ನು ಇಲ್ಲಿ ವಿವರಿಸಿ ಹೇಳಬೇಕಾದ ಅಗತ್ಯವಿಲ್ಲ. ಮೈಸೂರು ರಾಜ್ಯದಲ್ಲಿ ಈಗಾಗಲೇ ಶರಾವತಿ ಯೋಜನೆಯಿಂದ ಹೇರಳವಾಗಿ ವಿದ್ಯುಚ್ಛಕ್ತಿ ಸಿಗುತ್ತದೆ ಮತ್ತು ಹೊಸಪೇಟೆಯಲ್ಲಿ ಬಹಳ ಉತ್ತಮ ದರ್ಜೆಯ ಕಬ್ಬಿಣದ ಅದುರು ಸಿಗುವುದರಿಂದ ಹೊಸಪೇಟೆ ಉಕ್ಕಿನ ಕಾರ್ಖಾನೆಯನ್ನು ಸ್ಥಾಪನೆ ಮಾಡಲು ಬಹಳ ಉತ್ತಮವಾದ ಸ್ಥಳ ಎನ್ನುವುದನ್ನು ಇಲ್ಲಿ ಪುನಃ ಪುನಃ ಒತ್ತಿ ಹೇಳಬೇಕಾಗಿಲ್ಲ. ಆದರೆ ಈ ತೀರ್ಮಾನವನ್ನು ಕೈಗೊಳ್ಳುವ ಸಂದರ್ಭದಲ್ಲಿ ಕೇಂದ್ರ ಸರಕಾರದವರು ಮೈಸೂರು ರಾಜ್ಯದ ಜನತೆ ಹಾಗೂ ಮೈಸೂರು ರಾಜ್ಯದ ಮಂತ್ರಿಮಂಡಲ ಬಲಹೀನವಾಗಿದೆ ಮತ್ತು ಜನರು ಹೋರಾಟ ಮಾಡುವ ಭಾವನೆಯಲ್ಲಿಲ್ಲ ಎಂದು ತಿಳಿದುಕೊಳ್ಳಬಾರದು ಎಂದು ಈ ಸಂದರ್ಭದಲ್ಲಿ ಹೇಳಲು ಇಚ್ಛೆಪಡುತ್ತೇನೆ. ಇದೇ ಸಂದರ್ಭದಲ್ಲಿ ಈ ರಾಜ್ಯ ಸರಕಾರ ಹೊಸಪೇಟೆಯಲ್ಲೇ ಉಕ್ಕಿನ ಕಾರ್ಖಾನೆ ಪಡೆಯಲು ಸರ್ವಪ್ರಯತ್ನವನ್ನೂ ಮಾಡಬೇಕು.

[MR. DEPUTY SPEAKER in the Chair]

ಈ ಸತತ ಪ್ರಯತ್ನದಲ್ಲಿ ಈ ಸಭೆಯ ಎಲ್ಲ ಪಕ್ಷದವರ ಬೆಂಬಲವಿದೆ ಎಂದು ಅವರೂ ತಿಳಿದುಕೊಳ್ಳಬೇಕು ಎಂದು ಈ ಸಂದರ್ಭದಲ್ಲಿ ಹೇಳಲು ಇಚ್ಛಿಪಡುತ್ತೇನೆ. ಇವೊತ್ತು ನಮ್ಮ ದೇಶದಲ್ಲಿ ಇಂತಹ ನಿರ್ಣಯಗಳನ್ನು ಎಲ್ಲ ಜನರೂ ತೆಗೆದುಕೊಂಡು ಸುಮ್ಮನೆ ನೋಡುತ್ತಿದ್ದಾರೆ, ನಮ್ಮ ಜನರು ಹೋರಾಟ ಮಾಡದೇ ಸೌಮ್ಯ ರೀತಿಯಿಂದ ನಡೆದುಕೊಂಡು ಹೋಗುತ್ತಿದ್ದಾರೆ, ಇದರಿಂದಾಗಿ ನಮ್ಮ ಬೇಡಿಕೆಗಳು ಈಡೇರುವುದಿಲ್ಲ ಎನ್ನುವ ಸಂಶಯ ನಮ್ಮ ರಾಜ್ಯದ ಜನತೆಯಲ್ಲಿ ಬರುತ್ತಿದೆ. ಕೇಂದ್ರ ಸರಕಾರದವರು ಯಾವತ್ತೂ ಒಂದು ನಿರ್ಣಯ ತೆಗೆದುಕೊಳ್ಳಬೇಕಾದರೂ ಕೂಡ ಮೈಸೂರು ರಾಜ್ಯದ ಹಿತಕ್ಕೆ ಒಳಪಟ್ಟು ಉಕ್ಕಿನ ಕಾರ್ಖಾನೆಯನ್ನು ಸ್ಥಾಪನೆ ಮಾಡುವ ನಿರ್ಣಯ ಮಾಡಬೇಕು. ಹಾಗೇ ಕೇಂದ್ರ ಸರಕಾರದವರು ಇದಕ್ಕೆ ಒಳಪಡದೆ ಯಾವುದಾದರೂ ನಿರ್ಣಯ ನಮ್ಮ ಹಿತಕ್ಕೆ ವಿರೋಧವಾಗಿ ತೆಗೆದುಕೊಂಡರೆ, ಇಡೀ ಮೈಸೂರು ರಾಜ್ಯದ ಜನತೆ ಬೇರೆ ರಾಜ್ಯಗಳಲ್ಲಿ ಹೋರಾಟ ಮಾಡಿದಂತೆ ಇಲ್ಲೂ ಹೋರಾಟ ನಡೆಸಲು ಹಿಂಜರಿಯುವುದಿಲ್ಲ ಎಂದು ಇಲ್ಲಿ ಹೇಳುವುದಕ್ಕೆ ಇಷ್ಟಪಡುತ್ತೇನೆ. ಪ್ರಜಾ ರಾಜ್ಯದಲ್ಲಿ ನಮ್ಮ ಕಂದಾಯದ ಹಣದಿಂದ ಕಟ್ಟಿರುವ ಸರಕಾರದ ಕಚೇರಿಗಳನ್ನು ಸುಡುವುದು, ರೈಲ್ವೆ ದಾರಿಗಳನ್ನು ಸುಡುವುದು, ಹಾಗೂ ಇನ್ನಿತರ ಸಾರ್ವಜನಿಕರ ಕೆಲಸಕಾರ್ಯಗಳಿಗೆ ಧಕ್ಕೆ ತರುವಂತಹ ಕೆಲಸಗಳನ್ನು ಮಾಡಿದರೆ ದೇಶದ ಪ್ರಗತಿ ಸಾಧನೆಯಾಗುತ್ತದೆ ಎನ್ನುವ ಭಾವನೆ ನಾವು ಇಟ್ಟಿಲ್ಲ. ಇಂತಹ ಸನ್ನಿವೇಶ ಬಂದರೆ ಹೋರಾಟ ಮಾಡಲು ಸಿದ್ಧರಿದ್ದೇವೆ ಎಂದು ಕೇಂದ್ರ ಸರ

ಕಾರಕ್ಕೆ ಇಲ್ಲ ಹೇಳುತ್ತೇನೆ. ನಾನು ಇದರ ವಿಚಾರವಾಗಿ ಅಧಿಕವಾಗಿ ಹೇಳಲು ಇಚ್ಛೆ ಪಡುವುದಿಲ್ಲ. ಈ ಸಭೆಯಲ್ಲಿ ತಂದಿರುವ ನಿರ್ಣಯಕ್ಕೆ ಸಂಪೂರ್ಣ ಸಮ್ಮತಿ ಇದೆ ಎಂದು ಬೇರೆ ಹೇಳಬೇಕಾಗಿಲ್ಲ, ಎಲ್ಲರೂ ಇದನ್ನು ಒಮ್ಮತದಿಂದ ಒಪ್ಪುತ್ತಾರೆ ಎನ್ನುವ ನಂಬಿಕೆ ನನಗಿದೆ ಎಂದು ಈ ಸಭೆಯಲ್ಲಿ ವಿನಂತಿ ಮಾಡಲು ಇಚ್ಛೆಪಡುತ್ತೇನೆ. ಈ ರಾಜ್ಯ ಸರಕಾರ ತಮ್ಮ ಒಂದು ಸರಕಾರದ ಹಂತದಲ್ಲಿ ಹೋರಾಟವನ್ನು ನಡೆಸಿ ಅದರಲ್ಲಿ ವಿಫಲವಾಗುವ ಸ್ಥಿತಿ ಬಂದರೆ, ಆಗ ಜನತೆಗೆ ಇದನ್ನು ಬಿಟ್ಟುಕೊಡಲಿ. ಆಗ ನಾವೆಲ್ಲರೂ ಸೇರಿ ಹೋರಾಟ ನಡೆಸಲು ಪ್ರಾರಂಭ ಮಾಡುತ್ತೇವೆ ಎಂದು ಹೇಳಲು ಇಚ್ಛೆಪಡುತ್ತೇನೆ. ಕೇಂದ್ರ ಸರಕಾರ ಐದನೇ ಉಕ್ಕಿನ ಕಾರ್ಖಾನೆಯನ್ನು ನಮ್ಮ ಮೈಸೂರು ರಾಜ್ಯದಲ್ಲಿ ಸ್ಥಾಪನೆ ಮಾಡದೇ ಹೋದಲ್ಲಿ ಇಡೀ ರಾಜ್ಯದ ಎಲ್ಲ ಭಾಗದ ಜನರೂ ಸರಕಾರಕ್ಕೆ ಬೆಂಬಲ ಕೊಟ್ಟು ಸರಕಾರದ ಒಂದು ಬಲವನ್ನು ಹೆಚ್ಚಿಸುವ ಕಾರ್ಯದಲ್ಲಿ ತೊಡಗಬಹುದು ಎಂದು ಇಲ್ಲಿ ನಿವೇದನೆ ಮಾಡುತ್ತೇನೆ. ಈ ಸಂದರ್ಭದಲ್ಲಿ ನಮ್ಮ ರಾಜ್ಯದ ಮುಖ್ಯಮಂತ್ರಿಗಳು ಹಾಗೂ ಅವರ ಮಂತ್ರಿಮಂಡಲದವರು ನಮ್ಮ ಆಡಳಿತ ಪಕ್ಷದವರು ಹಾಗೂ ವಿರೋಧ ಪಕ್ಷದ ಎಲ್ಲ ಸದಸ್ಯರೂ ಇದಕ್ಕೆ ತಮ್ಮ ಒಮ್ಮತದ ಬೆಂಬಲವನ್ನು ತಮ್ಮ ಸಹಾಯವನ್ನು ಕೊಡುತ್ತಾರೆಂಬ ನಂಬಿಕೆ ನನಗೆ ಪೂರ್ತಿ ಇದೆ. ಆದುದರಿಂದ ನಮ್ಮ ರಾಜ್ಯದ ಎಲ್ಲ ಜನರ ಸಹಕಾರ, ಸಹಾಯ ಸಲಕರಣೆಗಳು ಇಡೀ ರಾಜ್ಯದಲ್ಲಿ ದೊರೆಯುವುದರಿಂದ ಈ ಸರಕಾರ ಯಾವ ರೀತಿಯ ಅಪನಂಬಿಕೆಯನ್ನೂ ಇಟ್ಟುಕೊಳ್ಳದೆ ಕೇಂದ್ರ ಸರಕಾರದಲ್ಲಿ ಹೋರಾಡಿ ನಮ್ಮ ರಾಜ್ಯದಲ್ಲೇ ಐದನೇ ಉಕ್ಕಿನ ಕಾರ್ಖಾನೆಯನ್ನು ಸ್ಥಾಪನೆ ಮಾಡುವ ಪ್ರಯತ್ನ ಮಾಡಬೇಕು ಮತ್ತು ಎಲ್ಲರೂ ಈ ನಿರ್ಣಯವನ್ನು ಒಪ್ಪಬೇಕೆಂದು ಹೇಳಿ ನನ್ನ ಈ ನಾಲ್ಕು ಮಾತುಗಳನ್ನು ಮುಗಿಸುತ್ತೇನೆ.

†Sri S. M. KRISHNA (Maddur).—Sir, I would like to endorse the resolution that is tabled by my esteemed friend Sri Appanna. There are no two opinions in this House about the advisability of the location of the Steel Plant in Hospet. The situation arising out of the vacillation that we find in the Central Government abut the location of the Steel plant is the primary reason for all the confusion that is found in certain parts of this country. Some time back, the Anglo-American Consortium did give its report, to the Central Government and it has made certain recommendations. Sir, why should it be that the Central Government has not been able to take up this issue and come to certain reasonable conclusions? I, as one who firmly believes in democratic methods to achieve the goals, I congratulate the attitude of the Prime Minister. I am not a great admirer of the present Prime Minister of India. But still I must congratulate the Prime Minister for being firm on one issue and that is, economic questions shall not be dictated by agitations. If our friends in Andhra Pradesh, if they felt that political fasts, economic fasts and other acts of the people of the Andhra pradesh would be a decisive fector in trying to pursuade the Government to take a particular decision which is favourable to Andhra Pradesh in the location of the Steel Plant, the country knows and Andhra Pradesh also may realise now, that they were sadly disillusioned. We are happy and we feel gratified that there is a strong Government in the Centre.as well as in the States that they will not be cowed down by tereats and fasts or by threats of other violent actions. To that extent and to that extent only I congratulates the Central Government. That is only a negative approach to the problem. What has happened to the positive aspect of the problem? By now, all of us know and the State Government has prepared their case for the location of the steel plant in Hospect. There is rich deposit of iron ore there, the content of which is beyond dispute,

(SRI S. M. KRISHNA)

and so taking other economic factors as also financial factors into consideration, it is necessary that we the members of the Mysore Legislative Assembly should strengthen the hands of our State Government. It is not my intention to go into their failures. That serves no purpose at this stage of time. It is our fond hope that with this resolution we are going to give to our State Government, they will feel doubly assured not only of the support of the party which they represent, but also those of us who sit here on this side of the House.—We are wholeheartedly supporting the resolution tabled by Mr. Appanna—that the State Government would do everything possible, everything Constitutional to see ultimately that the steel plant, if at all it is going to come, would be located in Hospet. With these few words, I again endorse the resolution.

[MR. SPEAKER in the Chair.]

ಶ್ರೀ ಸಿದ್ದಯ್ಯ ಕಾಶಿಮಠ (ಶಿರಹಟ್ಟಿ).—ಮಾನ್ಯ ಅಧ್ಯಕ್ಷರೇ, ಶ್ರೀಮಾನ್ ಅಪ್ಪಣ್ಣನವರು ತಂದಿರತಕ್ಕ ನಿರ್ಣಯಕ್ಕೆ ನಾನು ಪೂರ್ತಿಯಾಗಿ ಬೆಂಬಲ ಕೊಡುತ್ತಾ ಒಂದೆರಡು ಮಾತುಗಳನ್ನು ಹೇಳಬಯಸುತ್ತೇನೆ. ಈಗ ನಮ್ಮ ರಾಜ್ಯದ ಹೊಸಪೇಟೆಯಲ್ಲಿ ಉಕ್ಕಿನ ಕಾರ್ಖಾನೆಯನ್ನು ಸ್ಥಾಪಿಸುವ ಬಗ್ಗೆ ಈಗಾಗಲೇ ತಜ್ಞರು ತಮ್ಮ ಒಪ್ಪಿಗೆಯನ್ನು ಕೊಟ್ಟಿದ್ದಾರೆ. ನಾವಾದರೂ ಈ ಮೊದಲೇ, ಅಲ್ಲಿ ಸಿಗತಕ್ಕ ಅದರು, ಅಲ್ಲಿ ಸಿಗತಕ್ಕ ನೀರು ಮತ್ತು ಸಾಗಾಣಿಕೆಯ ಸೌಕರ್ಯಗಳನ್ನೊಳಗೊಂಡ ಹೊಸಪೇಟೆಯಲ್ಲಿ ಈ ಉಕ್ಕಿನ ಕಾರ್ಖಾನೆಯನ್ನು ಸ್ಥಾಪನೆ ಮಾಡಬೇಕೆಂದು ತಿಳಿಸಿದಾಗ್ಯೂ ಕೂಡ ಮೊನ್ನೆ ತಾನೆ ಕೇಂದ್ರಸರ್ಕಾರದಲ್ಲಿರತಕ್ಕ ಇದಕ್ಕೆ ಸಂಬಂಧಿಸಿದ ಮಂತ್ರಿಗಳಾದ ಶ್ರೀ ಸಂಜೀವ ರೆಡ್ಡಿಯವರು ತಮ್ಮ ಭಾಷಣದಲ್ಲಿ ಹಣ ಸಿಕ್ಕಿದಾಗ ವಿಶಾಖಪಟ್ಟಣದಲ್ಲಿ ಉಕ್ಕಿನ ಕಾರ್ಖಾನೆಯನ್ನು ಸ್ಥಾಪನೆ ಮಾಡಿಯೇ ತೀರುತ್ತೇವೆಂದು ಹೇಳಿದರು. ಅಷ್ಟೇ ಅಲ್ಲದೆ ರಾಜಕಾರಣೀಕವಾಗಿ ಅವರು ಆರೋಪಕ್ಕೆ ಗುರಿಯಾಗಿದ್ದಾರೆ. ಇದರಿಂದ ನಾವಾದರೂ ವಿಚಾರ ಮಾಡತಕ್ಕ ವಿಷಯವೆಂದರೆ, ವಿಶಾಖಪಟಣಕ್ಕೆ ಯಾವ ಯಾವ ತರದ ಇನ್‌ಫ್ಲುಯೆನ್ಸ್ ಇದೆ ಎನ್ನತಕ್ಕದ್ದನ್ನು ನೋಡಬೇಕು. ನಾವು ಇವತ್ತು ಅಲ್ಲಿನ ಸೌಕರ್ಯವನ್ನು ನೋಡುವುದಾದರೆ, ಅಲ್ಲಿನ ಸೌಕರ್ಯಗಳಿಗಿಂತ ಎಲ್ಲಾ ವಿಧಗಳಲ್ಲೂ ನಮ್ಮ ಹೊಸಪೇಟೆಯ ಸನ್ನಿವೇಶವು ಯೋಗ್ಯವಾದುದೆಂದು ಎಲ್ಲರೂ ಒಪ್ಪಬೇಕಾದ ವಿಷಯ. ಈ ರೀತಿಯ ಯೋಗ್ಯತೆ ಹೊಸಪೇಟೆಗೆ ಇದ್ದರೂ ಕೇಂದ್ರ ಸರ್ಕಾರದವರು ಸುಮ್ಮನೆ ಇರುವುದನ್ನು ನೋಡಿದರೆ, ನಮಗಾದರೂ ಇವತ್ತಿನ ದಿವಸ ಆಶ್ಚರ್ಯವಾಗುತ್ತದೆ. ಇವತ್ತಿನ ದಿವಸ ಜನರು ಹೇಳುತ್ತಿದ್ದಾರೆ—ನಮ್ಮ ಸರ್ಕಾರಕ್ಕೆ ಕೇಂದ್ರ ಸರ್ಕಾರದ ಮೇಲೆ ಯಾವ ತರದ ಒತ್ತಾಯವನ್ನು ತರಲಿಕ್ಕೂ ಶಕ್ತಿ ಇಲ್ಲ, ಅದರ ಸಲುವಾಗಿ ಈ ರೀತಿಯಾಗಿದೆ ಮತ್ತು ನಮ್ಮ ಸರ್ಕಾರದ ಸರಿಯಾದ ಪ್ರತಿನಿಧಿಗಳು ಕೇಂದ್ರಸರ್ಕಾರದಲ್ಲಿ ಇಲ್ಲದಿರುವುದರಿಂದ ನಮಗೆ ಹೊಸಪೇಟೆಯಲ್ಲಿ ಕಾರ್ಖಾನೆ ಸ್ಥಾಪನೆ ಮಾಡುವುದಕ್ಕೆ ಸಾಧ್ಯವಿಲ್ಲ ಎಂದು ನಾನಾದರೂ ಇವತ್ತು ಹೇಳುತ್ತಿದ್ದೇನೆ ನಾವು ನಮ್ಮ ರಾಜ್ಯದವರು, ಯಾವ ರೀತಿಯಲ್ಲೂ ಕೂಡ ಆಂಧ್ರದವರಿಗಿಂತ ಕಡಿಮೆ ಇಲ್ಲ, ಮತ್ತು ಯಾವ ರೀತಿಯಲ್ಲೂ ಹಿಂಜರಿಯತಕ್ಕವರಲ್ಲ. ಶ್ರೀ ಅಪ್ಪಣ್ಣನವರು ಹೇಳಿದ ಹಾಗೆ, ಕಟ್ಟಡಗಳನ್ನು ಸುಡುವುದಾಗಲೀ, ಅಂದೋಳನ ಮಾಡುವುದಾಗಲಿ, ಮಾಡಿ, ಅವರ ಮುಖಾಂತರವಾಗಿ ಇಂತಹ ಕಾರ್ಖಾನೆಗಳನ್ನು ಸ್ಥಾಪನೆ ಮಾಡುವುದೇ ಆದರೆ, ಅಥವ ಆ ರೀತಿಯಿಂದ ಪ್ರೊಜೆಕ್ಟುಗಳನ್ನು ಕೊಡುವಂತಹ ಹವ್ಯಾಸವನ್ನು ಇಟ್ಟುಕೊಂಡಿದ್ದೇನೆ. ಆದರೆ ನಾವು ಅದನ್ನು ಮಾಡಿ ತೋರಿಸಬೇಕೆಂದು ಹೇಳುತ್ತಿದ್ದೇನೆ. ಎಲ್ಲಾ ರೀತಿಯಲ್ಲೂ, ಹಕ್ಕುಬಾಧ್ಯತೆಯಿಂದ ಕೂಡಿರತಕ್ಕ ಈ ಐದನೇ ಉಕ್ಕಿನ ಕಾರ್ಖಾನೆಯನ್ನು ಹೊಸಪೇಟೆಯಲ್ಲಿ ಅವರು ಸ್ಥಾಪನೆ ಮಾಡದೆ ಹೋದರೆ, ನಮ್ಮ ರಾಜ್ಯದ 240 ಲಕ್ಷ ಜನರೂ ಅದಕ್ಕೆ ಒಗ್ಗಟಿನಿಂದ ಸರ್ವ ತ್ಯಾಗವನ್ನೂ ಮಾಡುವುದಕ್ಕೆ ಸಿದ್ಧ ಎಂದು ಹೇಳಿ, ಈಗ ಇಲ್ಲಿ ತಂದಿರತಕ್ಕಂತಹ ಈ ನಿರ್ಣಯವನ್ನು ನಾನು ಹೃತ್ಪೂರ್ವಕವಾಗಿ ಸ್ವಾಗತಿಸಿ, ಹೊಸಪೇಟೆಯಲ್ಲಿ 5ನೇ ಉಕ್ಕಿನ ಕಾರ್ಖಾನೆಯನ್ನು ಸ್ಥಾಪನೆ ಮಾಡಲೇಬೇಕೆಂದು ಹೇಳಿ ನನ್ನ ಈ ಎರಡು ಮಾತುಗಳನ್ನು ಮುಗಿಸುತ್ತೇನೆ.

†ಶ್ರೀ ಗಂಗಾಧರ ನಾಮೋಶಿ.—ಮಾನ್ಯ ಅಧ್ಯಕ್ಷರೇ, ಈಗ ತಂದಿರತಕ್ಕಂತಹ ನಿಲುವನ್ನು ಬೆಂಬಲಿಸುತ್ತಾ ನಾನು ಒಂದೆರಡು ಮಾತುಗಳನ್ನು ಹೇಳಬೇಕಾಗಿದೆ. ಈಗ ಹೊಸಪೇಟೆಯಲ್ಲಿ ಸಿಗತಕ್ಕಂತಹ ಒಳ್ಳೆಯ ಅದುರನ್ನು ಭಾರತ ಸರ್ಕಾರದವರು ರಫ್ತು ಮಾಡಿ ವಿದೇಶೀವಿನಿಮಯ ಗಳಿಸಬಹುದೆಂಬ ಅಭಿಪ್ರಾಯದಿಂದ ನಮ್ಮ ಸರ್ಕಾರಕ್ಕೆ, ನಮ್ಮ ಜನತೆಗೆ ಅನ್ಯಾಯ ಮಾಡುತ್ತಿದ್ದಾರೋ ಎಂದು ನನಗೆ ಕಾಣಿಸುತ್ತಿದೆ. ಆದರೆ ಈ ಮೊದಲು ಕರ್ಣಾಟಕ ಪ್ರಾಂತ್ಯ ವಿಚಾರದಲ್ಲಿ ಠರಾವು ಬಂದಾಗ, ಮಾನ್ಯ ಮಂತ್ರಿಯವರಾದ ಶ್ರೀ ರಾಮಕೃಷ್ಣ ಹೆಗ್ಗಡೆಯವರು ಹೇಳಿದರು, ಮುಖ್ಯವಾದ ಹೊಸಪೇಟೆಯ ಉಕ್ಕಿನ ಕಾರ್ಖಾನೆಯ ಪ್ರಶ್ನೆ ಬರುತ್ತದೆ, ಅದನ್ನು ಚರ್ಚಿಸೋಣ ಎಂದು. ಇದರ ಅರ್ಥ ಸರ್ಕಾರದವರು ಇದಕ್ಕೆ ಬೆಂಬಲ ಕೊಡುತ್ತಾರೆಂದು. ಒಂದು ವೇಳೆ ನಾವು ಒಮ್ಮತದಿಂದ ಪಾಸ್ ಮಾಡಿದ ಮೇಲೆ ಡೆಲ್ಲಿಯಲ್ಲಿ ಅದನ್ನು ಒಪ್ಪಲಿಲ್ಲವಾದರೆ, ಈ ಸರ್ಕಾರದವರು ರಾಜಿನಾಮೆಯನ್ನು ಕೊಡುತ್ತಾರೋ ಎಂದು ನಾನು ಕೇಳುತ್ತೇನೆ. ನಿನ್ನೆ ಮಾನ್ಯ ಮಂತ್ರಿಯವರು ಹೇಳಿದರು ನಾವೆಲ್ಲಾ ಕೇಳುತ್ತಿದ್ದೇವೆ, ನೀವೆಲ್ಲಾ ಒಳ್ಳೆಯ ರೀತಿಯಿಂದ ಸಹಕಾರ ಮಾಡಬೇಕು, ಸುಮ್ಮನೆ ನಮ್ಮ ಮೇಲೆ ಅಪಾದನೆ ಮಾಡುತ್ತೀರಿ, ಅದಕ್ಕೆ ಕೇಂದ್ರ ಸರ್ಕಾರದವರು ನಮಗೆ ಬೆಲೆ ಕೊಡುವುದಿಲ್ಲ ಎಂದು. ಇದಕ್ಕೆ ನಾನಾದರೂ ಹೇಳುತ್ತೇನೆ, ನೀವು ಯಾವ ರೀತಿ ಹೇಳುತ್ತೀರೋ, ಆ ರೀತಿ ಬೇಕಾದರೆ ಎಲ್ಲಾ ಆಪೊಸಿಶನ್‌ನವರೂ ಮಾಡುತ್ತೇವೆ. ಸತ್ಯಾಗ್ರಹ ಮಾಡಿ ಎಲ್ಲರೂ ಜೈಲಿಗೆ ಹೋಗೋಣ ಎಂದರೆ ಜೈಲಿಗೆ ಹೋಗೋಣ. ಆಂಧ್ರದವರು ಏನು ಮಾಡಿದ್ದಾರೆ, ಅದೇ ರೀತಿ ಮಾಡಿ ಬೇಕಾದರೆ, ಆ ರೀತಿ ಮಾಡುತ್ತೇವೆ. ಆದರೆ, ನಾನು ಕೇಳುವುದು ಒಂದೇ, ಈ ಅಸೆಂಬ್ಲಿಯಲ್ಲಿ ನಾವೆಲ್ಲಾ ಒಮ್ಮತದಿಂದ ಪಾಸ್ ಮಾಡಿರತಕ್ಕ ನಿರ್ಣಯವನ್ನು ಕೇಂದ್ರದವರು ಕಾರ್ಯರೂಪಕ್ಕೆ ತರಲು ಒಪ್ಪದೇ ಹೋದರೆ ತಾವು ಏನು ಹೇಳುತ್ತೀರಿ? ನಮಗೂ ಉಕ್ಕಿನ ಕಾರ್ಖಾನೆಯಾಗಬೇಕು. ಇಲ್ಲದೆ ಸುಮ್ಮನೆ ಇಲ್ಲಿ ಚರ್ಚೆ ಮಾಡುವುದರಿಂದ ಏನು ಪ್ರಯೋಜನವಿಲ್ಲ. ಇದಕ್ಕೂ ಮೊದಲು ಮಾನ್ಯ ಮಂತ್ರಿಯವರು ಇದನ್ನು ಸ್ಪಷ್ಟ ಪಡಿಸಿದರೆ ಒಳ್ಳೆಯದಾಗುತ್ತಿತ್ತು. ಅವರು ಒಪ್ಪಲಿಲ್ಲವೆಂದರೆ ನೀವು ಏನು ಮಾಡುತ್ತೀರಿ? ನೀವು ಏನು ಕಾರ್ಯಕ್ರಮವನ್ನು ಹಾಕಿಕೊಂಡಿದ್ದೀರಿ? ಕಟ್ಟುನಿಟ್ಟಾಗಿ ಏನಾದರೂ ಮಾಡುತ್ತೀರೋ ಎಂಬುದನ್ನು ಮಾನ್ಯ ಮಂತ್ರಿಯವರು ಹೇಳಬೇಕು. ಬಹಳ ಜನರು ಹೇಳುತ್ತಿದ್ದಾರೆ ಏನೆಂದರೆ, ಅಂಗ್ಲೋ ಅಮೇರಿಕನ್ ಕನ್‌ಸೋರ್ಟಿಯಮ್‌ನವರು ತಪ್ಪು ರಿಪೋರ್ಟ್ ಕೊಟ್ಟಿದ್ದಾರೆಂದು. ನಾನಾದರೂ ಹೇಳುತ್ತೇನೆ—ಆ ಕಾಲದಲ್ಲಿ ಕೇಂದ್ರದಲ್ಲಿ ಅವೇ ರಾಜ್ಯದವರಾಗಿದ್ದು, ಅದೇ ಪೋರ್ಟ್‌ಫೋಲಿಯೊವನ್ನು ಹಿಡಿದಿರತಕ್ಕಂತಹ ಮಂತ್ರಿಯವರು ತಪ್ಪು ಅಭಿಪ್ರಾಯ ಕೊಡಿಸಿದ್ದಾರೆಂದು ಸ್ಪಷ್ಟವಾಗಿ ನಾನು ಹೇಳುತ್ತೇನೆ. ಆದ್ದರಿಂದ ಇನ್ನಾದರೂ ನಮ್ಮ ಸರ್ಕಾರದವರು ಧೈರ್ಯದಿಂದ ಜಗತ್ತಿನಲ್ಲಿರತಕ್ಕ ಎಲ್ಲಾ ಎಕ್ಸ್‌ಪರ್ಟ್‌ಗಳನ್ನು ಕರೆಸಿ, ಇನ್‌ವೆಸ್ಟಿಗೇಶನ್ ಮಾಡಿಸಿ, ನಮ್ಮದು ಅದಕ್ಕಿಂತಲೂ ಒಳ್ಳೆಯದು, ಯೋಗ್ಯವಾದುದು ಎಂದು ತೋರಿಸುವ ಒಂದು ಸವಾಲನ್ನು ಕೇಂದ್ರ ಸರ್ಕಾರದವರಲ್ಲಿ ತೆಗೆದುಕೊಳ್ಳಬೇಕೆಂದು ನಾನು ಸರ್ಕಾರದವರಲ್ಲಿ ಬೇಡಿಕೊಳ್ಳುತ್ತೇನೆ. ಒಳ್ಳೆಯ ಕಾರ್ಯ ಮಾಡಬೇಕೆಂದು ಸರಕಾರದ ಉದ್ದೇಶ ಇದೆ. ನಮ್ಮ ರಾಜ್ಯದಲ್ಲಿ ದೊರೆಯುವ ಕಬ್ಬಿಣವನ್ನು ಒಳ್ಳೆಯ ರೀತಿಯಲ್ಲಿ ಉಪಯೋಗ ಮಾಡಬಹುದು, ಅದರ ಕಬ್ಬಿಣದ ಅದುರನ್ನು ಒಳ್ಳೆಯ ರೀತಿಯಲ್ಲಿ ಉಪಯೋಗ ಮಾಡದೆ ಅದನ್ನು ಹೊರಗಡೆ ಕಳಿಸುತ್ತಿದ್ದಾರೆ. ಇದು ಒಳ್ಳೆಯದಲ್ಲ. ಮೈಸೂರು ರಾಜ್ಯದಲ್ಲಿ ಬೇರೆ ಭಾಗದಲ್ಲಿ ಕೂಡ ಕಬ್ಬಿಣದ ಅದುರು ಸಿಕ್ಕುತ್ತದೆ ಎಂದು ತಿಳಿದು ಬಂದಿದೆ. ಚಿಕ್ಕಮಗಳೂರು ಜಿಲ್ಲೆಯಲ್ಲಿ ಇನ್‌ವೆಸ್ಟಿಗೇಷನ್ ಮಾಡಿದ ಕಾಲದಲ್ಲಿ ಕುದುರೆಮುಖ ಎಂಬ ಸ್ಥಳದಲ್ಲಿ ಒಳ್ಳೆಯ ಅದುರು ದೊರೆಯುತ್ತದೆ ಎಂದು ತಿಳಿದುಬಂದಿದೆ. ಆದುದರಿಂದ ಈ ಉಕ್ಕಿನ ಕಾರ್ಖಾನೆಯನ್ನು ನಮಗೇ ಏತಕ್ಕೆ ಕೊಡಬಾರದು? ನಾನು ರಾಜ್ಯ ಸರಕಾರಕ್ಕೆ ಒಂದು ವಿನಂತಿ ಮಾಡಿಕೊಳ್ಳುತ್ತೇನೆ. ಈ ಬಗ್ಗೆ ನಿಲುವು ಏನು ಎಂಬುದನ್ನು ತಿಳಿಸಬೇಕು. ಯಾವ ನಿಲುವು ಇಟ್ಟುಕೊಂಡು ಏನು ಮಾಡುತ್ತೇವೆ ಎಂಬುದನ್ನು ತಿಳಿಸಬೇಕು ಎಂದು ವಿನಂತಿ ಮಾಡುತ್ತೇನೆ. ನನಗೆ ಮಾತನಾಡಲು ಅವಕಾಶ ಕೊಟ್ಟಿದ್ದಕ್ಕಾಗಿ ಅಧ್ಯಕ್ಷರನ್ನು ವಂದಿಸಿ ನನ್ನ ಮಾತು ಮುಗಿಸುತ್ತೇನೆ.

11-30 A.M.

†ಶ್ರೀ ಟಿ. ಜಿ. ಸತ್ಯನಾರಾಯಣ (ಬಳ್ಳಾರಿ).—ಸ್ವಾಮಿ, ನಾನು ಬಳ್ಳಾರಿ ಜಿಲ್ಲೆಯವನಾಗಿರುವುದರಿಂದ ಈ ನಿರ್ಣಯದ ಬಗ್ಗೆ ಮಾತನಾಡಲು ಇಷ್ಟಪಡುತ್ತೇನೆ. ಬಳ್ಳಾರಿ ಜಿಲ್ಲೆಯಲ್ಲಿ ದೊರೆಯುವ ಕಬ್ಬಿಣದ ಅದುರು ಮತ್ತು ಮ್ಯಾಂಗನೀಸ್ ಅದುರು ಇದರಲ್ಲಿ ಶೇಕಡ 65-70 ರಷ್ಟು ಭಾಗ ಕಬ್ಬಿಣ ಇರುವುದರಿಂದ ಇದು ಅತ್ಯುತ್ತಮವಾದ ಅದುರು ಎಂದು ಹೇಳುತ್ತಾರೆ. ಈ ಪ್ರದೇಶದಲ್ಲಿ ಅತ್ಯುತ್ತಮವಾದ ಕಬ್ಬಿಣದ ಅದುರು ಸಿಕ್ಕುತ್ತದೆ, ರೈಲ್ವೆಬ್ರಾಡ್ ಗೇಜ್ ಬರಲಿದೆ,

(ಶ್ರೀ ಟಿ. ಜಿ. ಸತ್ಯನಾರಾಯಣ)

ನೀರಿನ ಸೌಕರ್ಯ ಇದೆ, ತುಂಗಭದ್ರ ಪ್ರೊಜೆಕ್ಟನಿಂದ ಕರೆಂಟ್ ದೊರೆಯುತ್ತದೆ. ಕರೆಂಟು ಅತ್ಯಂತ ಕಡಿಮೆ ದರಕ್ಕೆ ದೊರೆಯುತ್ತದೆ. ಆದುದರಿಂದ ಹೊಸಪೇಟೆಯಲ್ಲಿ ಉಕ್ಕಿನ ಕಾರ್ಖಾನೆ, ಮಾಡುವುದು ಒಳ್ಳೆಯದು. ಹೀಗಿರುವಾಗ ಆಂಧ್ರ ಪ್ರದೇಶದ ವಿಶಾಖಾಪಟ್ಟಣದಲ್ಲಿ ಪ್ಲಾಂಟ್ ಸ್ಥಾಪಿಸಬೇಕೆಂದು ಹೇಳುವುದು ಆಶ್ಚರ್ಯವಾಗುತ್ತದೆ. ಈ ಕಾರ್ಖಾನೆ ಬಳ್ಳಾರಿ ಜಿಲ್ಲೆಗೆ ಬರಬೇಕು ಎಂದು ಹೇಳುತ್ತೇನೆ. ಇದರಿಂದ ಬಡವರಿಗೆ ಅನುಕೂಲವಾಗುತ್ತದೆ. ಇಲ್ಲಿ ಲೇಬರ್ ಕೂಡ ಬಹಳ ಅಗ್ಗವಾಗಿದೆ. ಆದರೆ ವಿಶಾಖಾಪಟ್ಟಣದಲ್ಲಿ ಲೇಬರ್ ಖರ್ಚು ಹೆಚ್ಚು, ವಿಶಾಖಪಟ್ಟಣವು ಹಾರ್ಬರ್ ಆಗಿರುವುದರಿಂದ ಈ ಕಾರ್ಖಾನೆಗೆ ಅಪಾಯವಾಗಬಹುದು ಎಂದು ಸಹ ತಿಳಿದು ಬರುತ್ತದೆ. ನಮ್ಮ ಬಳ್ಳಾರಿ ಜಿಲ್ಲೆಯಲ್ಲಿ ಈ ಉಕ್ಕಿನ ಕಾರ್ಖಾನೆ ಪ್ರಾರಂಭಿಸುವುದಕ್ಕೆ ಸ್ವಾಭಾವಿಕವಾದ ಅನುಕೂಲತೆ ಇದೆ. ಆದುದರಿಂದ ಇದು ನಮ್ಮ ಜಿಲ್ಲೆಗೆ ಬರಬೇಕು. ಇದಕ್ಕಾಗಿ ಒಂದು ಹೈ ಪವರ್ ಕಮಿಟಿ ಮಾಡಿ ಅದಕ್ಕೆ ಮುಖ್ಯ ಮಂತ್ರಿಗಳನ್ನು ಅಧ್ಯಕ್ಷರನ್ನಾಗಿ ಮಾಡಿ ಈ ಉಕ್ಕಿನ ಕಾರ್ಖಾನೆಯನ್ನು ಹೊಸಪೇಟೆಯಲ್ಲಿ ಸ್ಥಾಪನೆ ಮಾಡುವುದಕ್ಕೆ ಕೇಂದ್ರ ಸರಕಾರದ ಮೇಲೆ ಒತ್ತಾಯ ಮಾಡಬೇಕು. ಈ ನಿರ್ಣಯವನ್ನು ಸಭೆಯು ಸರ್ವಾನುಮತದಿಂದ ಅಂಗೀಕರಿಸಬೇಕು ಮತ್ತು ಈ ಒಮ್ಮತದ ನಿರ್ಣಯವನ್ನು ಸಹ ತೆಗೆದುಕೊಂಡು ಹೋಗಿ ಕೇಂದ್ರ ಸರಕಾರವನ್ನು ಕೇಳಬೇಕು ಎಂದು ಹೇಳುತ್ತೇನೆ.

†Sri G. V. GOWDA (Palya).—Mr. Speaker, Sir, I am one of those who subscribe to the resolution that has been moved and I fully endorse the sentiments expressed by my friends. At the same time, I wish to point out the ommissions and commissions of our Government and the manner in which they have handled this matter relating to getting the location of the fifth steel plant. I also take this opportunity to warn the Government that unless they become alert and vigilant, they may go by default, because circumstances and instances are there where our Government is responsible to a large extent.

The Government of India took a decision in the III Plan, especially after the liberation of Goa that one integrated steel plant should be located in the south. Four steel plants have already been established in North India and when Sri C. Subramaniam was in charge, he took a decision that one must be located in the South. The Hindustan Steel Company and Dastur Company were asked to give suitable suggestion. They visited Visakhapntna, Hospet, Neivelli and gave a report to Government of India giving their opinion that Hospet was the best suited site. Our Government also knew this fact. Unfortunately, the portfolio was changed and Sri Sanjeeva Reddy took that portfolio. He entrusted that work to an Expert Committee to choose the best site. His intention was that Visakhapatna should be chosen. The report of the Hindustan Steel Co., was hushed up.

Mr. SPEAKER.—I suppose, Hospet depends on its merits. Are we attacking or am I permitting an attack of a person who is not here to defend ?

Sri G. V. GOWDA.—I am only saying how things have happened. This is a fact. Why did not our Government insist upon the Government of India to take a decision on that report available then ? Why did they sleep over this matter ? Is it not an omission on the part of this Government ? Knowing the fact that the Steel Ministry hushed up

this matter and entrusted this work to the Anglo-American Consortium, they kept quiet and the Consortium made further investigations. Our Government has ignored their responsibility ; they have not discharged their responsibility in the interest of the State in not having insisted upon the Government of India to accept the Dastur Company report and not to entrust the same work to the Anglo-American Consortium.

It is a fact that Sri Sanjeeva Reddy had the intent on and he must have had a talk or discussion with the Anglo-American Consortium even before the work was entrusted to them. The question of importing coking coal from America is there. We can even use the indigenous coking coal but the only place where it is in abundance is America. By studying the circumstances, I can draw the inference how this discussion must have taken place between the Steel Ministry and the Consortium. They started with a biased opinion. After all what the Consortium has stated is, Vizag is best suited on a coastal side and so far as Hospet is concerned it is the best inland site. I fully agree that it is the best site on the coastal side but if we take into consideration the other ralevant factors that should weigh in the location of steel factory everything comes in favour of Hospet. Therefore the Government of India ought to have taken into consideration all these factors and chosen the State which is relatively backward. Even assuming that both the sites are equally good, which is the State that has got to be given preference ? Equity and natural justice demand that when two things are equal only the weaker side should be preferred. From any point of view Mysore deserves to be given that preference. The reported statement of Sri Sanjeeva Reddy that he has threatened to give resignation goes to show, how things have been handled. The cat is out of the bag. When he was holding the portfolio with an intention to have the Steel plant at Vizag all these things were done It is a relevant point and our Government have slept over the matter. They did not pursue the matter. Everything should be weighed on merits. All the factors go to show that Hospet is more preferable than all other sites. The abundant rich iron ore in the vicinity, the availability of manganese, all go to show that Hospet is the best suited site. The only question is of coking coal. Here again, whether it is Vizag or Hospet or Salem, the coal has to be imported. Even the cost per unit tonne of manufacturing at Hospet by using cent per cent imported coal is 139·35 ; by using 50 per cent imported coal it is 141·00 ; if it is 25 per cent imported it is 133·00. It is stated that by using cent per cent imported coal the cost per tonne would be 149 in Vizag. The Geological Department of our Government have investigated and have given the cost list which clearly show that assembly cost steel is lower at Hospet than at Vizag. All these years we are exporting iron ore. Even the existing steel factories are importing coking coal. So some advantage or disadvantages are available here. There is the railway connection and we have export facilities at Goa. Including the cost of transport from Hospet to Madras or to Goa, it would not be more than what the manufacturing cost is in

(SRI G. V. GOWDA)

Vizag. The question of export comes when the country becomes self-sufficient. So, in conclusion I must say that from all aspects Hospect offers the best site for the proposed integrated plant and it could be installed more econemically, more speedily than elsewhere in South India.

Mr. SPEAKER.—Is there anybody who wants to oppose this resolution ?

Hon. MEMBERS.—No.

ಶ್ರೀ ಆರ್. ಮುನಿಸ್ವಾಮಯ್ಯ (ದೇವನಹಳ್ಳಿ).—ಸ್ವಾಮಿ, ಈ ಸಭೆಯ ಮುಂದೆ ಮಂಡಿಸಿರುವಂಥ ವಿಶೇಷ ನಿರ್ಣಯವನ್ನು ನಾನು ಸಂಪೂರ್ಣವಾಗಿ ಅನುಮೋದಿಸಿ ಬೆಂಬಲವನ್ನು ಕೊಡುತ್ತೇನೆ. ಮೈಸೂರು ರಾಜ್ಯದ ಹೊಸಪೇಟೆಯಲ್ಲಿ ಐದನೇ ಉಕ್ಕಿನ ಕಾರ್ಖಾನೆಯನ್ನು ಸ್ಥಾಪಿಸಬೇಕೆಂದು ಭಾರತ ಸರ್ಕಾರದವರಿಗೆ ಈ ಸಭೆಯವರು ತೀವ್ರವಾಗಿ ಒತ್ತಾಯಪಡಿಸುತ್ತಾರೆ ಎಂಬುದನ್ನು ಈ ಸಭೆಯವರು ಮಾತ್ರವಲ್ಲ ದೇಶದ ಪ್ರತಿಯೊಬ್ಬರೂ ಒತ್ತಾಯಪಡಿಸತಕ್ಕ ವಿಷಯವಾಗಿದೆ. ಇದನ್ನು ನಾವು ಕಾರ್ಯಗತಗೊಳಿಸಬೇಕಾದರೆ ನಮಗೆ ಏನೇನು ಅನುಕೂಲತೆಗಳಿವೆ ಎನ್ನುವುದನ್ನು ನಾವು ಯೋಚನೆ ಮಾಡಬೇಕಾಗಿದೆ. ಇದುವರೆಗೂ ಮಾತನಾಡಿದಂಥ ಸದಸ್ಯರು ಎಲ್ಲ ವಿಷಯಗಳನ್ನೂ ಬಹುಮಟ್ಟಿಗೆ ಕೂಲಂಕಷವಾಗಿ ವಿಮರ್ಶೆ ಮಾಡಿದ್ದಾರೆ. ಅವರ ಜೊತೆಗೆ ನಾನೂ ಸೇರಿ ಕೆಲವು ವಿಷಯಗಳನ್ನು ಹೇಳುತ್ತೇನೆ.

ಮೈಸೂರು ರಾಜ್ಯ ವಿಸ್ತಾರವಾಗದೆ ಸಣ್ಣ ರಾಜ್ಯವಾಗಿದ್ದ ಕಾಲದಲ್ಲಿಯೇ ಚಿಕ್ಕಮಗಳೂರು ಪ್ರದೇಶದಲ್ಲಿ, ಭದ್ರಾವತಿಯಲ್ಲಿ 1916ನೆ ಇಸವಿಯಲ್ಲಿಯೇ ಕಬ್ಬಿಣದ ಕಾರ್ಖಾನೆ ಸ್ಥಾಪನೆಯಾಗಿ ಅಲ್ಲಿಂದ ಉಕ್ಕು ಮೊದಲಾದುವನ್ನು ತಯಾರು ಮಾಡಿಕೊಂಡು ಬಂದಿದೆ. ಚಿಕ್ಕಮಗಳೂರು, ದಕ್ಷಿಣ ಕನ್ನಡ, ಉತ್ತರ ಕನ್ನಡ, ಬಳ್ಳಾರಿ ಈ ಭಾಗಗಳಲ್ಲಿ ಕಬ್ಬಿಣದ ಅದುರು ವಿಶೇಷವಾಗಿ ಸಿಕ್ಕುವುದಲ್ಲದೆ ಉಕ್ಕನ್ನು ತಯಾರು ಮಾಡಲು ಬೇಕಾದ ಮ್ಯಾಂಗನೀಸ್, ಅದುರು, ಸುಣ್ಣ ಕಲ್ಲು ಮೊದಲಾದುವು ಬೇರೆ ಕಡೆ ದೊರಕುವುದಕ್ಕಿಂತಲೂ ಕಡಮೆ ಬೆಲೆಯಲ್ಲಿ ದೊರಕುತ್ತ ಇರುವುದು ಖಚಿತವಾಗಿ ನಮ್ಮ ಲೆಕ್ಕಪತ್ರಗಳಿಂದ ತಿಳಿದುಬರುತ್ತದೆ. ಈ ಪ್ರದೇಶದಲ್ಲಿ ಕಾರ್ಮಿಕರು ಬೇರೆ ಪ್ರದೇಶಕ್ಕಿಂತ ಕಡಮೆ ಕೂಲಿಯಿಂದಲೇ ತೃಪ್ತಿಪಟ್ಟುಕೊಂಡು ಶ್ರದ್ಧೆಯಿಂದ ದುಡಿಯುವವರಾಗಿದ್ದಾರೆ. ಈ ಪ್ರದೇಶದಲ್ಲಿರುವ ಜನಗಳಿಗೆ ಸಾಕಷ್ಟು ಕೆಲಸ, ಉದ್ಯೋಗ ದೊರೆಯಲು ಸಾಧ್ಯವಾಗಿಲ್ಲ. ಉಕ್ಕಿನ ಕಾರ್ಖಾನೆಯನ್ನು ಹೊಸಪೇಟೆಯ ಹತ್ತಿರ ಸ್ಥಾಪನೆ ಮಾಡುವುದರಿಂದ ಅನೇಕ ನಿರುದ್ಯೋಗಿಗಳಿಗೆ ಕೆಲಸ ದೊರೆಯುವುದಲ್ಲದೆ ಅವರ ಜೀವನ ಮಟ್ಟವೂ ಉತ್ತಮವಾಗುತ್ತದೆ. ಮೈಸೂರು ದೇಶದಲ್ಲಿ ಬಹಳ ವರ್ಷಗಳಿಂದ ವಿದ್ಯುಚ್ಛಕ್ತಿಯನ್ನು ಉತ್ಪಾದನೆ ಮಾಡುತ್ತಾ ಬಂದಿದ್ದು ಈಗ ಮಹಾರಾಷ್ಟ್ರ, ತಮಿಳುನಾಡು ಮತ್ತು ಆಂಧ್ರ ಪ್ರದೇಶಗಳಿಗೆ ನಮ್ಮ ರಾಜ್ಯದಿಂದ ವಿದ್ಯುಚ್ಛಕ್ತಿಯನ್ನು ಒದಗಿಸತಕ್ಕ ಸ್ಥಿತಿಯಲ್ಲಿದ್ದೇವೆ. ಉಕ್ಕಿನ ಕಾರ್ಖಾನೆಯನ್ನು ಹೊಸಪೇಟೆ ಹತ್ತಿರ ಸ್ಥಾಪಿಸುವುದಾದರೆ ನಮ್ಮ ದೇಶದಲ್ಲಿ ಕಡಮೆ ಬೆಲೆಯಲ್ಲಿ ಉತ್ಪತ್ತಿಯಾಗತಕ್ಕ ವಿದ್ಯುಚ್ಛಕ್ತಿಯನ್ನು ಉಪಯೋಗಿಸಿ ಪ್ರಪಂಚದಲ್ಲಿಯೇ ಉತ್ತಮವಾದ ಉಕ್ಕನ್ನು ತಯಾರಿಸಬಹುದು ಎಂದು ಪರಿಣಿತರು ಹೇಳುತ್ತಿದ್ದಾರೆ. ಅಷ್ಟೇ ಅಲ್ಲ ಆಹಾರ ಧಾನ್ಯಗಳ ವಿಷಯದಲ್ಲಿ ಇದು ಕೊರತೆಯ ಪ್ರದೇಶವಲ್ಲ. ಅಲ್ಲಿ ಸಾಕಷ್ಟು ಆಹಾರ ಧಾನ್ಯಗಳು ಬೆಳೆದು ಅಲ್ಲಿಯ ಜನರ ಪೂರೈಕೆಗೆ ಆಗಿ ಬೇರೆ ಕಡೆಗೂ ಕಳುಹಿಸುವಷ್ಟು ಬೆಳೆಯುವಂಥ ಪ್ರದೇಶವಾಗಿದೆ. ಸುಮಾರು ಒಂದೂವರೆ ವರ್ಷದ ಹಿಂದೆ ಅಮೇರಿಕಾದ ತಜ್ಞರು ಬಂದು ಪರಿಶೀಲನೆ ಮಾಡಿದರು, ಆಗ ಮೈಸೂರು ದೇಶದ ಅಧಿಕಾರಿಗಳು ವಿಶಿಷ್ಟ ಅಂಕಿಅಂಶಗಳನ್ನೂ ಅವರಿಗೆ ಒದಗಿಸಿದರು. ಅದರ ಆಧಾರದ ಮೇಲೆ ಅವರು ಹೊಸಪೇಟೆಯಲ್ಲೇ ಉಕ್ಕಿನ ಕಾರ್ಖಾನೆ ಸ್ಥಾಪನೆಯಾಗಬೇಕಾದ್ದು ಸೂಕ್ತವೆಂದು ತಿಳಿಸಿದರು. ಆದರೆ ಯಾರ ಕೈವಾಡದಿಂದಲೋ ಕೇಂದ್ರ ಸರ್ಕಾರದ ಸಚಿವರಾದ ಸಂಜೀವರೆಡ್ಡಿಯವರು ಏನು ಹೇಳಿದರೋ ಏನೋ ಅದರಿಂದಲೋ ಅಥವಾ ಬೇರೆ ಯಾವ ಒತ್ತಾಯದಿಂದಲೋ ಅಮೇರಿಕಾದ ತಜ್ಞರ ಅಭಿಪ್ರಾಯಕ್ಕೆ ಬೆಲೆ ಕೊಡದೆ ಮತ್ತೆ ಬದಲಾವಣೆ ಮಾಡಿ ವಿಶಾಖಪಟ್ಟಣದಲ್ಲಿ ಸ್ಥಾಪಿಸಬೇಕು, ಕೊಯಮತ್ತೂರಿನಲ್ಲಿ ಮಾಡಬೇಕು ಎಂಬ ಅಭಿಪ್ರಾಯಗಳು ಬರುವುದಕ್ಕೆ ಪ್ರಾರಂಭವಾಯಿತು. ಆಗ ನಮ್ಮ ಸರ್ಕಾರದ ಒತ್ತಾಯ ಸಾಲದೆಯೋ ಏನೋ ಹೊಸಪೇಟೆಯಲ್ಲಿ ಸ್ಥಾಪಿಸುವುದಕ್ಕೆ ಅಷ್ಟು ಪ್ರಾಮುಖ್ಯತೆ ಕೊಟ್ಟಂತೆ ಕಾಣುತ್ತಿಲ್ಲ. ಮುಂದಾದರೂ

ಕೂಡ ಹೊಸಪೇಟೆಯಲ್ಲೇ ಉಕ್ಕಿನ ಕಾರ್ಖಾನೆಯನ್ನು ಸ್ಥಾಪಿಸುವಂತೆ ಸರ್ವ ಪ್ರಯತ್ನವನ್ನೂ ಮಾಡಬೇಕು, ಜಾಗ್ರತೆಯಾಗಿ ಕೇಂದ್ರ ಸರ್ಕಾರದ ಮೇಲೆ ಸಾಕಾದಷ್ಟು ಒತ್ತಾಯಮಾಡಬೇಕು ಮತ್ತು ಇದಕ್ಕಾಗಿ ಒಂದು ಸಮಿತಿಯನ್ನು ಮಾಡಬೇಕು ಎಂದು ಹೇಳಿ ನನ್ನ ಮಾತನ್ನು ಮುಕ್ತಾಯ ಮಾಡುತ್ತೇನೆ.

†SRI ANNA RAO GANAMUKHI.—Mr. Speaker, Sir, I rise to support this resolution because I am also a subscriber to it. When this resolution was suggested, I felt that this Assembly will have to strengthen the weak hands of this Government in this respect. We know from press statements that the Congress President has said in this context that the Fifth Steel Plant will be located in Salem, because he hails from Madras, and the Central Ministers from Andhra are reiterating from time to time that Visakhapatnam will get the fifth steel plant. In this context I do not want to keep mum; I do not know whether our Government's voice will be heard or not. Therefore, it was considered imperative that this Assembly should at least express its strong opinion in favour of Hospet. As my friend was putting, the Dastur and Company examined the various aspects in regard to the location of the Fifth steel plant and they submitted a report in regard to the technical and economic feasibility of locating the fifth plant in the South; they have expressed strongly in this matter. That report is not before us. They have expressed themselves strongly that from all points of view Hospet is a suitable place for locating the fifth steel plant because water is available in plenty, the iron ore content is about 60 to 70% and then power is there. The only thing that is required is coking coal which has to be imported from other places. My friend was saying that the cost of production of steel here is lower than in any other place. We know that fundamentally our experts disagree but the disagreement between our experts and foreign experts is still more. For instance, there was sharp disagreement between Dastur and Company and the western experts as far as the Bokaro Steel Plant is concerned. They have estimated that the Bokaro Steel Plant would require about Rs. 1,000 crores whereas our experts say that it can be reduced to the tune of about Rs. 30 crores. Therefore, let me say in this connection that the Anglo-American Consortium has disagreed with the technical report of the Dastur and Company, because it happens to be report of another expert. Therefore, I do not think the Anglo-American Consortium Report has much value in view of the report of the Dastur and Company. The Government of India has taken a decision to postpone this fifth steel plant at least during the Fourth Plan period. We know they have to spend Rs. 1,000 crores for the Bokaro Plant. In this country there is already a furore that consumer articles are not available to the people. Therefore, should we write off this Bakaro Plant and locate the Fourth Plant somewhere in the South or should we have both the Bokaro Steel Plant as well as the fifth steel plant during the Fourth Plan ? I think the Government of India is bound by its promise to Russia and therefore whether it is economic or not, whether the expenditure is huge or little, they will have to undertake the Bokaro Project and spend about Rs. 1,000 crores. I am not sure whether the

(SRI ANNA RAO GANAMUKHI)

Government of India will be able to take up the fifth steel plant even during the fifth plan period because the cost of the Bokaro plant which is now estimated at Rs. 1,000 crores is bound to go up to Rs. 1,500 crores as a result of the spiralling prices and then we will not be able to finance it during the 4th plan or even the 5th plan. Devaluation also has contributed to the increase in the cost. The estimated cost of Rs. 1,000 crores may go up by 36% because we have Russian aid. When that is the real situation, I think the struggle now going on in Andhra is not based on any realistic appraisal of the situation. Somehow they want to snatch the 5th steel plant by struggle, but we on our part should not agitate. At the same time let us impress upon the authorities concerned that on economic and technical grounds the Indian experts have advised for its location at Hospet and so the next steel plant should be located at Hospet. I think this should be decided on merits only and not on any other consideration. So I support this resolution.

12-00 NOON.

†ಶ್ರೀ ಎಸ್. ಗೋಪಾಲಗೌಡ (ತೀರ್ಥಹಳ್ಳಿ).—ಮಾನ್ಯ ಅಧ್ಯಕ್ಷರೇ, ಸಭೆಯ ಮುಂದೆ ಇರುವ ಈ ಐದನೇ ಉಕ್ಕಿನ ಕಾರ್ಖಾನೆಯನ್ನು ನಮ್ಮ ರಾಜ್ಯದಲ್ಲಿಯೇ ಸ್ಥಾಪನೆ ಮಾಡಬೇಕು ಎಂದು ಹೇಳಿ ಒತ್ತಾಯಪಡಿಸುವುದಕ್ಕಾಗಿ ತಂದಿರುವ ಈ ನಿರ್ಣಯವನ್ನು ನಾನು ಸಮರ್ಥಿಸುತ್ತೇನೆ. ಈಗಾಗಲೇ ಹೊಸಪೇಟೆಯಲ್ಲಿ ಉಕ್ಕಿನ ಕಾರ್ಖಾನೆಯನ್ನು ಸ್ಥಾಪನೆ ಮಾಡುವುದಕ್ಕೆ ಏನೇನು ಅನುಕೂಲಗಳು ಮತ್ತು ಅನಾನುಕೂಲಗಳು ಇವೆ ಎನ್ನುವುದನ್ನು ಮಾನ್ಯ ಸದಸ್ಯರು ತಿಳಿಸಿದ್ದಾರೆ. ಈ ಐದನೇ ಉಕ್ಕಿನ ಕಾರ್ಖಾನೆಯನ್ನು ಸ್ಥಾಪನೆ ಮಾಡುವುದರ ಬಗ್ಗೆ ಸಂಪತ್ ಸಾಧನೆಗಳು ಎಷ್ಟರಮಟ್ಟಿಗೆ ಕೇಂದ್ರಸರ್ಕಾರದವರ ಹತ್ತಿರ ಇದೆ ಎನ್ನುವುದರ ಬಗ್ಗೆ ಈಚೆಗೆ ಆಂಧ್ರದವರು ನಡೆಸಿದ ಚಳುವಳಿಗೆ ಉತ್ತರ ಕೊಡುತ್ತಾ ಪ್ರಧಾನಿಯವರು 4 ನೇ ಯೋಜನೆಯಲ್ಲಿ 5ನೇ ಉಕ್ಕಿನ ಕಾರ್ಖಾನೆಯನ್ನು ಸ್ಥಾಪನೆ ಮಾಡತಕ್ಕದ್ದು ಸಾಧ್ಯವಾಗಲಾರದು ಎಂದು ಹೇಳಿದ್ದಾರೆ. ಅದೇ ರೀತಿ ನಮ್ಮ ಹಣಕಾಸಿನ ಸಚಿವರೂ ಕೂಡ ನಿನ್ನೆ ವಿಧಾನಪರಿಷತ್ತಿನಲ್ಲೋ ಎಲ್ಲೋ ಹೇಳಿದ್ದಾರೆ ಎಂದು ನಾನು ವರದಿ ನೋಡಿದೆ. ಸ್ವಾಮಿ, ರಾಜಕೀಯದಿಂದ ಮಾತನಾಡಿದರೆ, ಅಭಿಪ್ರಾಯ ವ್ಯಕ್ತಪಡಿಸಿದರೆ ಬಹುಶಃ ಈ ನಿರ್ಣಯವನ್ನು ಎರಡು ಪಕ್ಷದವರೂ ಸೇರಿ ಸರ್ವಾನುಮತದಿಂದ ಒಪ್ಪಿ ಭಾರತ ಸರ್ಕಾರದವರಿಗೆ ಕಳುಹಿಸಿ ಅವರ ಮೇಲೆ ನಾವು ಒತ್ತಾಯ ತರಬೇಕೆನ್ನುವ ಉದ್ದೇಶಕ್ಕೆ ಸ್ವಲ್ಪ ವ್ಯತ್ಯಯ ಬರಬಹುದು. ಆದ್ದರಿಂದ ಈ ನಿರ್ಣಯದ ಮೇಲೆ ಮಾತನಾಡುತ್ತಾ ನಾನು ಅಷ್ಟಾಗಿ ರಾಜಕೀಯವನ್ನು ಪ್ರಸ್ತಾಪ ಮಾಡುವುದಕ್ಕೆ ಇಷ್ಟಪಡುವುದಿಲ್ಲ. ಈ ಸಂದರ್ಭದಲ್ಲಿ ಆರ್ಥಿಕ ನೀತಿಗೆ ಸಂಬಂಧಪಟ್ಟ ಹಾಗೆ ಒಂದೆರಡು ಮಾತನ್ನು ಹೇಳುತ್ತೇನೆ. ಅನ್ನದ ಅಥವಾ ಆಹಾರ ಧಾನ್ಯಗಳ ಉತ್ಪಾದನೆಯಷ್ಟೇ ಒಂದು ರಾಷ್ಟ್ರವನ್ನು ನಿರ್ಮಾಣ ಮಾಡಬೇಕಾದರೆ ಉಕ್ಕಿನ ಅಗತ್ಯತೆಯೂ ಇರುತ್ತದೆ. ನಮ್ಮ ದೇಶದಲ್ಲಿ ಹೇರಳವಾದ ಖನಿಜ ಸಂಪತ್ತು ಇದೆ. ಅದರಲ್ಲೂ ಕರ್ನಾಟಕದ ಕಬ್ಬಿಣದ ಅದುರು, ಮ್ಯಾಂಗನೀಸ್ ಅದುರು, ಕ್ರೋಮೈಟ್ ಅದುರು, ಸುಣ್ಣಕಲ್ಲು ಮತ್ತು ಇತರ ಖನಿಜ ಸಂಪತ್ತು ಬಂಗಾರ, ಬೆಳ್ಳಿ, ತಾಮ್ರ ಇವನ್ನು ಬಿಟ್ಟರೆ ಭಾರತದಲ್ಲಿ ಮಾತ್ರವಲ್ಲ ಇಡೀ ಲೋಕಕ್ಕೆ ಪ್ರಸಿದ್ಧವಾದದ್ದು. ಆ ವಿಷಯದಲ್ಲಿ ಯಾರಿಗೂ ಅನುಮಾನವಿಲ್ಲ. ಈಗಾಗಲೇ ಮೊನ್ನೆ ತಾನೆ ಕುದುರೆಮುಖದಲ್ಲಿ, ಎಷ್ಟು ಇದೆ, ಕೊಡಚಾದ್ರಿಯಲ್ಲಿ ಎಷ್ಟು ಇದೆ, ಬೇರೆ ಬೇರೆ ಕಡೆಗಳಲ್ಲಿ ಎಷ್ಟು ಇದೆ, ಎನ್ನುವುದನ್ನು ಸಾಮಾನ್ಯವಾಗಿ ಪತ್ತೆ ಹಚ್ಚಿದ್ದಾರೆ, ಅಂದಾಜು ಮಾಡಿದ್ದಾರೆ. ಜೊತೆಗೆ ಈಚೆಗೆ ಆದಂಥ ಟೆಕ್ನೋ ಎಕನಾಮಿಕ್ ಸರ್ವೇನಲ್ಲೂ ಕೂಡ ಇದರ ಅಂಕಿಅಂಶ ದೊರೆಯುತ್ತದೆ. ಆದ್ದರಿಂದ ಈ ನಾಡಿನ ಖನಿಜ ಸಂಪತ್ತಿನ ಬಗ್ಗೆ ಭಾರತದವರೆಲ್ಲರೂ ಹೆಮ್ಮೆಪಡತಕ್ಕದ್ದೇ, ಏಕೆಂದರೆ, ಕರ್ನಾಟಕದಲ್ಲಿ ಇರುವ ಅದುರು ನಾವು ಕೈಗಾರಿಕೆ ಸ್ಥಾಪನೆ ಮಾಡಿದರೆ ಅದನ್ನೆಲ್ಲಾ ನಾವೇ ಹೊಂದುತ್ತೇವೆ ಎನ್ನತಕ್ಕ ಅಭಿಪ್ರಾಯ ಯಾರಿಗೂ ಇಲ್ಲ, ಭಾರತದ ಸಮಗ್ರವಾದ ಬೆಳವಣಿಗೆಗೆ ಭಾರತದ ಯಾವುದೇ ಭಾಗದಲ್ಲಿ ಏನೇ ನೈಸರ್ಗಿಕ ಸಂಪತ್ತು ಇರಲಿ ಅದನ್ನು ಪ್ರಜಾಹಿತದ ದೃಷ್ಟಿಯಿಂದ ರೂಢಿಸತಕ್ಕದ್ದು ಮುಖ್ಯ ಉದ್ದೇಶ. ಆದರೆ

ಈ ಒಂದು ವ್ಯವಹಾರದಲ್ಲಿ ಕೆಲವು ರಾಜಕೀಯಗಳು ನಡೆದಿವೆ. ಇತ್ತೀಚೆಗೆ ನಮ್ಮ ದೇಶ ಭಾರತ ಒಂದು ರಾಷ್ಟ್ರ, ಒಂದು ಗಣತಂತ್ರ ನಾವೆಲ್ಲಾ ಒಂದು ರಾಷ್ಟ್ರದ ಪ್ರಜೆಗಳು ಆಗಿದ್ದೂ ಕೂಡ ಕೆಲವೊಮ್ಮೆ ಅನಿವಾರ್ಯವಾಗಿ ಈ ರಾಜ್ಯದ ಹಿತಗಳಿಗಾಗಿ ಹೋರಾಡಬೇಕಾಗುತ್ತದೆ. ಕೆಲವು ಸಂದರ್ಭಗಳಲ್ಲಿ, ಈಗ ನೋಡಿ ಗಡಿಎಲ್ಲೆಕಟ್ಟನ್ನು ಕಾಯ್ದುಕೊಳ್ಳುವ ವಿಷಯದಲ್ಲಿ ಅಥವಾ ನೀರಿನ ಹಂಚಿಕೆ ವಿಷಯದಲ್ಲಿ ಅಥವಾ ಕೈಗಾರಿಕೆಯನ್ನು ಸ್ಥಾಪನೆ ಮಾಡುವ ವಿಷಯದಲ್ಲಿ ಇಂತಹ ವಿಷಯಗಳಲ್ಲಿ ಕೆಲವೊಮ್ಮೆ ಪ್ರತಿಯೊಂದು ರಾಜ್ಯವೂ ಅದು ತನಗೆ ಬೇಕು, ತನ್ನ ರಾಜ್ಯದ ಅಭಿವೃದ್ಧಿ ಹೆಚ್ಚು ಬೇಗ ಮತ್ತು ಹೆಚ್ಚು ದೃಢವಾದ ರೀತಿಯಲ್ಲಿ ಆಗಬೇಕು ಎನ್ನತಕ್ಕ ಕಾರಣದಿಂದ ಅಲ್ಲಿಯ ಸರ್ಕಾರಗಳು ಮತ್ತು ರಾಜಕೀಯ ಪಕ್ಷಗಳು ಹಾಗೂ ಜಾಗೃತರಾಗಿರತಕ್ಕ ಜನತೆ ತಮ್ಮ ಅಭಿಪ್ರಾಯಗಳನ್ನು ಹೇಳುತ್ತವೆ ಮತ್ತು ಅದಕ್ಕಾಗಿ ಕೆಲವು ಸಂದರ್ಭಗಳಲ್ಲಿ ಆಂದೋಳನಗಳು, ಚಳುವಳಿಗಳನ್ನು ನಡೆಸುವುದೂ ಉಂಟು. ಅದನ್ನು ನಾನು ತಪ್ಪು ಎಂದು ಹೇಳುವುದಿಲ್ಲ. ಆದರೆ ಮಾರ್ಗದರ್ಶನ ಮಾಡುತ್ತಾ ಇರತಕ್ಕ, ಕೇಂದ್ರದಲ್ಲಿ ಕುಳಿತು ಇಡೀ ದೇಶದ ಸಮಗ್ರ ದೃಷ್ಟಿಯನ್ನು ಹೊಂದಿರತಕ್ಕ ನಮ್ಮ ನಾಯಕರು ಅಥವಾ ಜವಾಬ್ದಾರಿಯನ್ನು ಹೊತ್ತಿರತಕ್ಕವರು, ಅವರು ತಾವು ಯಾವ ರಾಜ್ಯದಿಂದ ಬಂದಿದ್ದಾರೋ ಆ ರಾಜ್ಯದ ಹಿತವನ್ನು ಎತ್ತಿ ಹಿಡಿಯುವುದಕ್ಕೆ ಹೋದಾಗಲೇ ಈ ದೇಶದ ಐಕ್ಯತೆಗೆ, ಭದ್ರತೆಗೆ ಭಂಗ ಬರುವುದು. ಆಗಲೇ ಈ ನಾಯಕತ್ವದಲ್ಲಿ ಜನತೆಗೆ ಅವಿಶ್ವಾಸ ಮೂಡುವುದು. ಈ ಸಂದರ್ಭದಲ್ಲಿ ಸ್ವಲ್ಪಮಟ್ಟಿಗೆ ಅಂತಹ ಒಂದು ಪ್ರಯತ್ನ ನಡೆದಿದೆ. ಇದು ಪ್ರಯತ್ನ ಅಲ್ಲ ಒಂದು ರಾಜಕೀಯ ನಡೆದಿದೆ ಎಂದು ಸೂಕ್ಷ್ಮವಾಗಿ ಹೇಳುವುದಕ್ಕೆ ನಾನು ಇಷ್ಟಪಡುತ್ತೇನೆ.

ಇನ್ನು ಸ್ವಾಮಿ, ಬೇರೆ ಸೈಟ್‌ಗಳ, ಸ್ಥಳಗಳ ಬಗ್ಗೆ ನಾವು ಅಷ್ಟಾಗಿ ಮಾತನಾಡಬೇಕಾದ ಅಗತ್ಯತೆ ಇಲ್ಲ. ಏಕೆಂದರೆ, ನಾವು ಇಲ್ಲಿ ಒಂದು ಮಾತನ್ನು ಹೇಳಬಹುದು—ಬಂದರನ್ನು ಹೊಸಪೇಟೆಯಲ್ಲಿ ಕಟ್ಟುವುದಕ್ಕಾಗುವುದಿಲ್ಲ. ಎಲ್ಲಿ ಸಮುದ್ರವಿದೆಯೋ ಅಲ್ಲೇ ಅದನ್ನು ಕಟ್ಟಬೇಕು. ಆದರೆ ಈ ಕಾರ್ಖಾನೆಯನ್ನು ದೇಶದಲ್ಲಿ ಎಲ್ಲಿ ಬೇಕಾದರೂ ಕಟ್ಟಬಹುದು. ಒಟ್ಟಿನಲ್ಲಿ ನಾನು ಒಂದು ಮಾತನ್ನು ಹೇಳುವುದಾದರೆ, ನಮ್ಮ ದಕ್ಷಿಣ ಭಾರತದಲ್ಲಿರತಕ್ಕ ಒಂದು ಕಬ್ಬಿಣದ ಕಾರ್ಖಾನೆಯೆಂದರೆ, ಅದು ಭದ್ರಾವತಿ ಕಾರ್ಖಾನೆ. ಆದರೆ ಈ ಕೈಗಾರಿಕೆ ಅಲ್ಲಿ ಎಷ್ಟು ಬೆಳೆಯಬೇಕಾಗಿತ್ತೋ, ಎಷ್ಟು ವಿಸ್ತಾರವಾಗಬೇಕಾಗಿತ್ತೋ ಅಷ್ಟಾಗಲಿಲ್ಲ ಎಂದು ಹೇಳಬಹುದು. ಇತ್ತೀಚೆಗೆ ಅಲ್ಲಿ ಕೆಲವು ಫೆರೋಸಿಲಿಕಾನ್ ಪ್ಲಾಂಟುಗಳನ್ನು ಹಾಕಿ ಅದರ ಉತ್ಪತ್ತಿಯನ್ನು ಜಾಸ್ತಿ ಮಾಡಿದ್ದಾರೆ, ಅದನ್ನು ನಾನು ಮಾಡಿಲ್ಲ ಎಂದು ಹೇಳಲಾರೆ. ಆದರೆ ಅಷ್ಟನ್ನೇ ನಾನು ಒಂದು ತೃಪ್ತಿಕರವಾದ ಬೆಳವಣಿಗೆ ಎಂದು ಕರೆಯಲಾರೆ. ಉತ್ತರ ಇಂಡಿಯಾದಲ್ಲಿ 4 ಭಾರಿ ದೊಡ್ಡ ದೊಡ್ಡ ಕಬ್ಬಿಣ ಮತ್ತು ಉಕ್ಕಿನ ಕಾರ್ಖಾನೆಗಳು ರುರ್ಕೆಲ, ಭಿಲಾಯ್, ಬೊಕಾರೋ, ಜೆಂಷೆಡ್‌ಪುರ್ ಇತ್ಯಾದಿ ಸ್ಥಳಗಳಲ್ಲಿ ಸ್ಥಾಪಿತವಾಗಿವೆ. ಆದರೆ ಅಲ್ಲಿಯೂ ಕೂಡ ಅವುಗಳ ಬೆಳವಣಿಗೆ ಅಷ್ಟು ತೃಪ್ತಿಕರವಾಗಿದೆ ಎಂದು ಹೇಳಲಾರೆ. ಏನೇ ಆಗಲಿ ಅದಕ್ಕೆ ಕೇಂದ್ರ ಸರ್ಕಾರದವರು ಸಾಕಷ್ಟು ನಿಗಾ ಕೊಡುತ್ತಿದ್ದಾರೆ. ಇದೆಲ್ಲಾ ಏನೇ ಇರಲಿ, ಒಟ್ಟು ಇಂಡಿಯಾ ದೇಶದಲ್ಲಿರತಕ್ಕ ಖನಿಜ ಸಂಪತ್ತನ್ನು ಸಂಪನ್ಮೂಲಗಳನ್ನು ಬಳವಡಿಸಿಕೊಂಡರೆ ಇಲ್ಲಿ ಇನ್ನೂ ಆರೆಂಟು ಭಾರೀ ಪ್ರಮಾಣದ ಉಕ್ಕಿನ ಕಾರ್ಖಾನೆಗಳನ್ನು ಸ್ಥಾಪಿಸುವುದಕ್ಕೆ ಅವಕಾಶವಿದೆ; ಅಷ್ಟು ಸೌಲಭ್ಯಗಳೂ ಇವೆ. ದೇಶದಲ್ಲಿ ಈ ದಿವಸ ಯಾವ ಮಟ್ಟದಲ್ಲಿ ಜನರು ಈ ಕಾರ್ಖಾನೆಗಳ ಸ್ಥಾಪನೆಗಾಗಿ ಪ್ರಯತ್ನ ಮಾಡುವುದಕ್ಕೆ ಹೊರಟಿದ್ದಾರೆಂಬುದನ್ನು ನಾನು ಹೆಸರನ್ನು ಹಿಡಿದು ಹೇಳಬಹುದು, ತಯಾರಿದ್ದೇನೆ, ಆದರೆ ಅದಕ್ಕೆ ಅಧ್ಯಕ್ಷರು ಅಪ್ಪಣೆಯನ್ನು ಕೊಡುವುದಿಲ್ಲವಾದ ಕಾರಣ ಇಷ್ಟನ್ನೇ ಹೇಳುತ್ತೇನೆ—ಕೇಂದ್ರದಲ್ಲಿರತಕ್ಕ ಕೆಲವು ಜನ ಮುಖಂಡರುಗಳು ತಮ್ಮ ರಾಜ್ಯದ ಹಿತವನ್ನು ಎತ್ತಿ ಹಿಡಿಯುವುದಕ್ಕಾಗಿ ಅನೇಕ ಅಲ್ಲಸಲ್ಲದ ಕಾರ್ಯಗಳಲ್ಲಿ ಕೈಹಾಕಿದ್ದಾರೆಂದು ಹೇಳದಿದ್ದರೆ ವಿಧಿಯಿಲ್ಲ. ನ್ಯಾಯ ದೃಷ್ಟಿಯಿಂದ ವಿಷಯವನ್ನು ಪರಿಶೀಲನೆ ಮಾಡುವುದಾದರೆ, ಬಂಗಾಳ ಕೊಲ್ಲಿಯಿಂದ ಹೊಸಪೇಟೆಗೆ ಎಷ್ಟು ದೂರವಾಗುತ್ತದೆಯೋ ಅಷ್ಟೇ ದೂರ ಅರಬ್ಬಿ ಸಮುದ್ರದಿಂದ ಹೊಸಪೇಟೆಗಿದೆ. ಹೀಗೆ ಅದು ಒಂದು ಮಧ್ಯ ಸ್ಥಳವಾಗಿದೆ. ಅಲ್ಲಿ ಒಂದು ಕಾರ್ಖಾನೆಯನ್ನು ಮಾಡಿದರೆ ಅಲ್ಲಿ ಕೆಲಸಕ್ಕೆ ಬರೀ ಕರ್ನಾಟಕದವರಿಗೇ ಅವಕಾಶವಾಗುವುದಿಲ್ಲ, ಭಾರತದಲ್ಲಿರತಕ್ಕ ಜನರಿಗೆಲ್ಲಾ ಅಲ್ಲಿ ಕೆಲಸ ಮಾಡುವುದಕ್ಕೆ ಅವಕಾಶವಿರುತ್ತದೆ, ಹಾಗೇ ಅಲ್ಲಿ ಉತ್ಪತ್ತಿಯಾಗತಕ್ಕ ಉಕ್ಕನ್ನು ಮೈಸೂರು ರಾಜ್ಯ ಒಂದೇ ಬಳಸುವುದಿಲ್ಲ. ಅದರ ಉಪಯೋಗ ಇಡೀ ಇಂಡಿಯಾ ದೇಶಕ್ಕೆಲ್ಲಾ ಇದ್ದೇ ಇರುತ್ತೆ ಅದು ಸಾಮಾನ್ಯವಾದ ಕಾರ್ಖಾನೆಯಲ್ಲ, ಭಾರೀ ಕಾರ್ಖಾನೆ. ಅಲ್ಲಿಗೆ ಈಗಾಗಲೇ ಬ್ರಾಡ್‌ಗೇಜನ್ನು ಹಾಕಲಾಗುತ್ತಿದೆ. ಈಗ ಇದನ್ನು ಆ ವಿಶಾಖಪಟ್ಟಣದಲ್ಲಿ ಹಾಕಲು ಏನು ಅನುಕೂಲವಿದೆ ಎಂಬುದನ್ನು ಕೆಲವರೇನು ಹೇಳುತ್ತಿದ್ದಾರೆ—ಅದು ಬಹಳ ಉತ್ತಮವಾದ ಸೈಟು ಎಂದು, ಅದು ಸಮುದ್ರ ತೀರದಲ್ಲಿದೆ. ಅಲ್ಲಿಗೆ ಈ ಅದುರೆಲ್ಲಾ ಎಲ್ಲಿಂದ ಹೋಗಬೇಕು ? ಅಲ್ಲಿಂದ ಅಲ್ಲಿ ಕಾರ್ಖಾನೆಯಾದ ನಂತರ ಅಲ್ಲಿ ಉತ್ಪನ್ನವಾಗತಕ್ಕ ಸಾಮಾನುಗಳನ್ನು ಬಳಕೆದಾರರಿಗೆ

(ಶ್ರೀ ಎಸ್. ಗೋಪಾಲಗೌಡ)

ಸರಬರಾಯಿ ಮಾಡಲು ಅವುಗಳನ್ನು ಎಲ್ಲಿಗೆ ಸಾಗಿಸಬೇಕು ? ಅಲ್ಲಿ ತಯಾರಾದ ವಸ್ತುಗಳನ್ನು ಬೇರೆ ಕಡೆಗೆ ಸಾಗಿಸುವುದಕ್ಕೆಷ್ಟು ಖರ್ಚು ಬೀಳುತ್ತದೋ ಅಷ್ಟೇ ಖರ್ಚು ಆ ಅದುರನ್ನು ಅಲ್ಲಿಗೆ ರವಾನೆ ಮಾಡಲು ತಗಲಬಹುದು. ಹೀಗಿರುವಾಗ ಅಲ್ಲಿ ಸಾಗಾಣಿಕೆಯ ವೆಚ್ಚವನ್ನು ನಾವು ಉಳಿಸಿದ್ದೆಲ್ಲಿ? ಅಲ್ಲಿ ಉತ್ಪನ್ನವಾದ ಸಾಮಾನುಗಳನ್ನು ಬೇರೆ ಕಡೆಗೆ ಸಾಗಿಸುವಾಗ ಅದಕ್ಕೆ ತಗಲುವ ವೆಚ್ಚವನ್ನೆಲ್ಲಾ ಸಾಮಾನಿನ ಮೇಲೆ ಹಾಕಬೇಕಾಗಿ ಬರುತ್ತದೆ, ಆಗ ಅವುಗಳ ಬೆಲೆ ಬಹಳ ಜಾಸ್ತಿಯಾಗಲೇಬೇಕು. ದಸ್ತೂರ್ ಸಮಿತಿ ನೇಮಕವಾಯಿತು. ಆಗ ನಮ್ಮ ಸರ್ಕಾರ ಅದರ ಬಗ್ಗೆ ಅಷ್ಟಾಗಿ ಆಸಕ್ತಿಯನ್ನು ವಹಿಸಲಿಲ್ಲ. ನಮ್ಮ ರಾಜ್ಯದಲ್ಲಿರತಕ್ಕ ನಮ್ಮ ರಾಜಕೀಯ ಮುಖಂಡರು ಕೇಂದ್ರದಲ್ಲಿರತಕ್ಕ ರಾಜಕಾರಿಣಿಗಳನ್ನು ಕಂಡು ಅವರ ಮೇಲೆ ತಮ್ಮ ಒಂದು ಪ್ರಭಾವವನ್ನು ಬೀರತಕ್ಕ ಚೈತನ್ಯ ನಮ್ಮ ಮುಖಂಡರಲ್ಲಿಲ್ಲ. ಹೀಗಾಗಿ ಅಲ್ಲಿನವರ ಅಭಿಮಾನ ನಮ್ಮ ಮೇಲೆ ಕಡಮೆ ಯಾಯಿತು. ಕರ್ನಾಟಕ ಒಂದು ಪ್ರತಿಮೆ ಭಾರತದ ಜನರ ಮನಸ್ಸಿನಲ್ಲಿ ಕಟ್ಟೊ ಹಾಗೆ ನಮ್ಮ ಮುಖಂಡರು ಮಾಡಲಿಲ್ಲ. ಅಂದರೆ ಡೆಲ್ಲಿಯಲ್ಲಿರತಕ್ಕವರಿಗೆ ದಕ್ಷಿಣ ಇಂಡಿಯಾ ಎಂದರೆ, ಕೇವಲ ಒಂದು ಮದ್ರಾಸ್, ಒಂದು ಕೇರಳ ಇಷ್ಟು ಮಾತ್ರ ಅವರ ಮನಸ್ಸಿನಲ್ಲಿದ್ದು ನಮ್ಮ ಮೈಸೂರಿನ ಅಥವಾ ಕರ್ನಾಟಕದ ಹೆಸರೇ ಅವರಿಗೆ ಗೊತ್ತಿಲ್ಲ; ನಮ್ಮ ಮುಖಂಡರು ಕೆಲಸ ಮಾಡಲಿಲ್ಲ. ಮೈಸೂರಿನವರು ಎಂದರೆ ಅವರಿಗೆ ಇವರು ಯಾರೆಂಬುದೇ ಗೊತ್ತಿಲ್ಲ. ಅವರ ಮನಸ್ಸಿನ ಮೇಲೆ ನಮ್ಮ ಪರಿಣಾಮ ಹೀಗಾಗಿ ನಮ್ಮ ಕರ್ನಾಟಕದ ಚಿತ್ರ ಮೂಡಿಲ್ಲ. ಇದಕ್ಕೆ ಕಾರಣಗಳು ಅನೇಕ ವಾಗಿವೆ. ಆದರೆ ಇದರಲ್ಲಿ ರಾಜ್ಯಸರ್ಕಾರ ತನ್ನ ಒಂದು ಹೊಣೆಯನ್ನು ಜವಾಬ್ದಾರಿಯಿಂದ ನಿರ್ವಹಿಸಿಲ್ಲ ಎಂದು ಹೇಳಬಹುದು. ಅವರು ಇದರ ಬಗ್ಗೆ ಆಸಕ್ತಿಯನ್ನು ವಹಿಸಿದ್ದರೆ ಅವರು ಇದನ್ನು ಈ ಸಭೆಯಲ್ಲಿರತಕ್ಕ ಎಲ್ಲಾ ಸದಸ್ಯರನ್ನೂ ತಮ್ಮ ವಿಶ್ವಾಸಕ್ಕೆ ತೆಗೆದುಕೊಂಡು ಸದಸ್ಯರ ಅಭಿಪ್ರಾಯಗಳನ್ನು ಸಂಗ್ರಹಣೆ ಮಾಡಿ ಎಲ್ಲಾ ಪ್ರಯತ್ನಗಳನ್ನೂ ಮಾಡಬೇಕಾಗಿತ್ತು. ವಿರೋಧ ಪಕ್ಷದವರೆಂದೂ ಇದಕ್ಕೆ ಅಡ್ಡಿಯನ್ನು ಒಡ್ಡಲಿಲ್ಲ. ಏನೇ ಆಗಲಿ, ನಮ್ಮ ಸರ್ಕಾರಕ್ಕೆ ಇನ್ನೊಬ್ಬರನ್ನು ಕೇಳಬೇಕೆಂಬ ಮನೋಭಾವ ಇಲ್ಲ. ಇವರು ಈ ವಿಚಾರದಲ್ಲಿ ವಿರೋಧ ಪಕ್ಷದವರನ್ನು ಕೇಳಿದರೆ ಅವರೇ ಎಲ್ಲಿ ಇದನ್ನು ಕಿತ್ತುಕೊಂಡು ಬಿಡುತ್ತಾರೋ ಎನ್ನುವ ಒಂದು ಮನೋಭಾವ ತಾಳಿರುವಂತೆ ಕಾಣುತ್ತಿದೆ. ಅಂಥ ಭಯದ ಅವಕಾಶವಿಲ್ಲ ಇಲ್ಲಿ. ಅವರಿಗೆ ಬಹಿರಂಗವಾಗಿ ಅವರ ಪಾರ್ಟಿ ಯಲ್ಲಿರತಕ್ಕ ಕೆಲವರನ್ನು ಇಲ್ಲಿಯವರಾಗಲೀ ಅಥವಾ ಹೊರ ರಾಜ್ಯದವರಾಗಲಿ ಅವರನ್ನು ಟೀಕೆ ಮಾಡುವುದಕ್ಕೆ ಕಾಂಗ್ರೆಸ್ ಪಕ್ಷಕ್ಕೆ ಸಾಧ್ಯವಿಲ್ಲವೆನ್ನುವುದಾಗಿದ್ದರೆ—ಅದನ್ನು ನಮಗೆ ಬಿಡಲಿ, ನಾವು ಸಂಜೀವರೆಡ್ಡಿಗಳನ್ನಾಗಲೀ ಅಥವಾ ಕಾಮರಾಜರನ್ನೇ ಆಗಲಿ ನಾವು ಟೀಕೆ ಮಾಡುತ್ತೇವೆ. ಅವರು ನಮಗೆ ಅನ್ಯಾಯವನ್ನು ಮಾಡುತ್ತಿದ್ದರೆ ನಾವು ಸುಮ್ಮನೆ ಕುಳಿತುಕೊಳ್ಳುವುದಕ್ಕಾಗುವುದಿಲ್ಲ.

ಇನ್ನು ನಮ್ಮ ಮುಖ್ಯಮಂತ್ರಿಗಳು—ಮೂರು ಕಡೆಗೂ ಒಂದೊಂದನ್ನು ಕೊಡಲಿ ಎಂದು ಹೇಳಿದ್ದಾರೆ. ಏನನ್ನು ಕೊಡುವುದು ಮೂರು ಕಡೆಗೂ ? ಅಂದರೆ, ಅವರ ಅಭಿಪ್ರಾಯದಲ್ಲಿ ಒಂದು ಸ್ಟೀಲ್ ಪ್ಲಾಂಟನ್ನು ಆಂಧ್ರದಲ್ಲಿರತಕ್ಕ ವಿಶಾಖಪಟ್ಟಣಕ್ಕೂ, ಒಂದು ಸ್ಟೀಲ್ ಪ್ಲಾಂಟನ್ನು ಹೊಸ ಪೇಟೆಗೂ ಮತ್ತೆ ಒಂದನ್ನು ಸೇಲಂಗೂ ಕೊಡಿ ಎಂದು ಅವರು ಅಭಿಪ್ರಾಯವನ್ನು ವ್ಯಕ್ತಪಡಿ ಸಿರುವಂತೆ ಕಂಡು ಬರುತ್ತಿದೆ. ಕೇಂದ್ರದವರಿಗೆ ಅಂಥ ಸಾಮರ್ಥ್ಯವಿದ್ದರೆ ಮಾಡಲಿ, ನಾನು ಬೇಡ ವೆನ್ನುವುದಿಲ್ಲ. ನಮ್ಮ ದೇಶದ ಅವಶ್ಯಕತೆಯನ್ನು ಪೂರೈಸಬೇಕಾಗಿದ್ದರೆ ನಮಗೆ ಇಂಥ ದೊಡ್ಡ ಪ್ರಮಾಣದ ಕಾರ್ಖಾನೆಗಳು ಇನ್ನೂ 4-6 ಬೇಕೇ ಬೇಕು. ಆದರೆ ಅವರಲ್ಲಿ ಅಷ್ಟಕ್ಕೆಲ್ಲಾ ಹಣ ವಿದೆಯೇ ? ಅದಿಲ್ಲ ಎನ್ನುವಾಗ ಹೀಗೆ ಮಾತನಾಡುವುದರಲ್ಲಿ ಅರ್ಥವಿಲ್ಲ. ಹೊಸಪೇಟೆಯು ಭೌಗೋಳಿಕವಾಗಿ ಒಂದು ಮಧ್ಯ ಪ್ರದೇಶವಾಗಿದೆ. ಇಲ್ಲಿ ಅದನ್ನು ಮಾಡಿದರೆ ಅದು ಈ ಮೈಸೂರು ರಾಜ್ಯದ ಮದ್ರಾಸಿನ ಹಾಗೂ ಕೇರಳ ಮತ್ತು ಮಹಾರಾಷ್ಟ್ರಗಳ ಬೇಡಿಕೆಯನ್ನು ಪೂರೈಸಬಲ್ಲದು ; ಇಷ್ಟೂ ರಾಜ್ಯಗಳ ಹಿತವನ್ನು ಅದು ಕಾಪಾಡಬಲ್ಲದು. ಅದು ಈ ಎಲ್ಲಾ ರಾಜ್ಯಗಳಲ್ಲಿರತಕ್ಕ ಸಂಪನ್ಮೂಲಗಳನ್ನು ಉಪಯೋಗ ಮಾಡಿಕೊಂಡು ಕೆಲಸ ಮಾಡಬಹುದು. ಆದುದರಿಂದ ನಾನು ಇಲ್ಲಿರತಕ್ಕ ನಮ್ಮ ರಾಜಕೀಯ ಮುಖಂಡರೆಂಬ ಜನರಲ್ಲಿ ಅರಿಕೆ ಮಾಡಿಕೊಳ್ಳುವುದೇನೆಂದರೆ: ನಾವು ನಮ್ಮ ನಮ್ಮ ಪ್ರಾಂತೀಯತೆಯ ದೃಷ್ಟಿಯನ್ನು ಕೈಬಿಟ್ಟು ಅದು ತಮಗೆ ಆಗಬೇಕೆಂಬ ಹಠ ಸಾಧನೆಯನ್ನು ಮೂಲೆಗೊತ್ತಿ ಎಲ್ಲಿ ಅದಕ್ಕೆ ಅನುಕೂಲ ಹೆಚ್ಚಾಗಿದೆಯೋ ಅಲ್ಲಿ ಅದನ್ನು ಮಾಡುವಂತೆ ಮಾಡಲು ಪ್ರಾರ್ಥನೆ ಮಾಡಿಕೊಳ್ಳುತ್ತೇನೆ.

ಇನ್ನು ಈ ಉಕ್ಕಿನ ಕಾರ್ಖಾನೆಯ ವಿಚಾರದಲ್ಲಿ ಹೇಳುವುದೇನಿದೆ ಎಂದರೆ—ಈ 5ನೇ ಉಕ್ಕಿನ ಕಾರ್ಖಾನೆಯ ವಿಚಾರದಲ್ಲಿ ಪ್ಲಾನಿಂಗ್ ಸಮಿತಿಯವರೂ ಮತ್ತು ಕೇಂದ್ರದವರು ಇದರ ಸ್ಥಾಪನ

ವಿಚಾರದಲ್ಲಿ ಸಾವಕಾಶ ಮಾಡಿದ್ದೇ ಇಷ್ಟೆಲ್ಲಾ ಚಳವಳಿಗಳಾವುದಕ್ಕೆ ಕಾರಣವಾಯಿತು ಎಂಬುದನ್ನು ಯಾರೂ ಮರೆಯಬಾರದು. ಇದನ್ನು ಬಹಳ ಹಿಂದೆಯೇ ಹೊಸಪೇಟೆಯಲ್ಲಿ ಸ್ಥಾಪನೆ ಮಾಡಬೇಕಾದ ಒಂದು ಜವಾಬ್ದಾರಿ ಕೇಂದ್ರದವರ ಮೇಲಿತ್ತು. ಅದನ್ನು ಅವರು ಮಾಡಲಿಲ್ಲ. ಆದರೆ ಕೇಂದ್ರದಲ್ಲಿದ್ದ ಶ್ರೀ ಸಂಜೀವರೆಡ್ಡಿಯವರು ಇದಕ್ಕೆ ಬಹುಪಾಲು ಜವಾಬ್ದಾರರು ಎಂಬುದನ್ನು ಒಪ್ಪದೆ ಶ್ರೀ ರಾಮರಾಯರು ಬಹಳ ಹೇಳಿದ್ದಾರೆ, ಹಿಂದೆ ಒಂದಾವರ್ತಿ ಶ್ರೀ ಅಣ್ಣಾರಾಯರು ಮಾತನಾಡುತ್ತಾ ಎಕಾನಮಿ ವಿಷಯಗಳನ್ನು ಪರಿಶೀಲಿಸುವಾಗ ಅದರಲ್ಲಿ ಪಾಲಿಟಿಕ್ಸನ್ನು ಏಕೆ ಬೆರೆಸುತ್ತೀರಿ ಎಂದು ಹೇಳಿದ್ದಾರೆ.

ಕೈಗಾರಿಕಾ ಹಿತದೃಷ್ಟಿ ಇರಬೇಕು. ನಾಡಿನ, ರಾಷ್ಟ್ರದ ಒಟ್ಟು ಹಿತದೃಷ್ಟಿ ಇರಬೇಕು. ಈ ದೃಷ್ಟಿಯನ್ನು ಇಟ್ಟುಕೊಂಡು ಕೈಗಾರಿಕೆಗಳನ್ನು ಸ್ಥಾಪನೆ ಮಾಡಬೇಕಾದ್ದು ಅವಶ್ಯಕ. ಇನ್ನು ಬೇರೆ ವಿವರಗಳ ಬಗ್ಗೆ ಹೋಗುವುದಕ್ಕೆ ಇಷ್ಟಪಡುವುದಿಲ್ಲ. ಶ್ರೀ ಜಿ. ಅಣ್ಣಾರಾವ್ ಅವರು ಇದರ ಬಗ್ಗೆ ಚಳುವಳಿ ಬೇಡವೆಂದು ಹೇಳಿದರು. ಶ್ರೀ ಅಪ್ಪಣ್ಣನವರು ಶೂರರು. ಇದರ ಬಗ್ಗೆ ಹೋರಾಡಬೇಕೆಂದಿದ್ದಾರೆ. ಆಮರಣಾಂತರ ಉಪವಾಸ ಬೇಕಾದರೆ ಅವರು ಮಾಡಬಹುದು. ನಾಳೆಯೇ ಮಾಡಿದರೂ ಮಾಡುತ್ತಾರೆ. ಪರಾಕ್ರಮಿಗಳು, ಶೂರರು, ಹೋರಾಟ ಮಾಡುವವರು ಮತ್ತು ಜೀವಾರ್ಪಣೆ ಮಾಡುವವರು ಕರ್ನಾಟಕದಲ್ಲಿ ಇಲ್ಲವೇ ಇಲ್ಲ ಎನ್ನುವ ಭಾವನೆ ಬೇಡ. ಯಾವುದಕ್ಕೂ ನಮ್ಮ ಜನ ಸಿದ್ಧಸಿದ್ದಾರೆ. ಇಲ್ಲದೇ ಇರತಕ್ಕಂಥ ಸ್ಟೀಲ್ ಪ್ಲ್ಯಾಂಟ್ ಬೇಕೆಂದು ಆಕಾಶಕ್ಕೆ ಹಾರುವುದು ಸರಿಯಲ್ಲ ಎಂದು ಸಮಾಧಾನದಿಂದ ಇದ್ದೇವೆ. ಅದಕ್ಕಾಗಿ ಹೋರಾಟದ ಅವಶ್ಯಕತೆಯಿಲ್ಲವೆಂದು ಸುಮ್ಮನಿದ್ದೇವೆ. ರಾಜ್ಯಸರ್ಕಾರದವರು ಈ ಬಗ್ಗೆ ವಿಶೇಷವಾದ ಪ್ರಯತ್ನಗಳನ್ನು ಮಾಡಬೇಕು. ಜನರಲ್ಲಿ ತಪ್ಪು ಕಲ್ಪನೆಯಾಗುವುದಕ್ಕೆ ಅವಕಾಶ ಕೊಡಬೇಡಿ. ಹೊಸಪೇಟೆಯಲ್ಲಿ ಉಕ್ಕಿನ ಕಾರ್ಖಾನೆ ಸ್ಥಾಪನೆ ಮಾಡುವುದಕ್ಕೆ ಅವಶ್ಯಕತೆ ಇದೆ ಎನ್ನುವುದನ್ನು ಕೇಂದ್ರ ಸರ್ಕಾರದವರಿಗೂ ಆ ಯೋಜನೆ ಮಂಡಲಿಯವರಿಗೂ ಮನಗಾಣಿಸಿಕೊಡಬೇಕು. ನಮ್ಮ ಸರ್ಕಾರದವರ ಒತ್ತಾಯಪೂರ್ವಕವಾದ ಈ ನಿರ್ಣಯವನ್ನು ಕೇಂದ್ರದವರು ಒಪ್ಪುತ್ತಾರೆ ಎಂದು ಆಶಿಸಿ ನನ್ನ ಮಾತನ್ನು ಮುಗಿಸುತ್ತೇನೆ.

† ಶ್ರೀ ರಾಮಕೃಷ್ಣ ಹೆಗ್ಗಡೆ.—ಮಾನ್ಯ ಅಧ್ಯಕ್ಷರೇ, ಮಾನ್ಯ ಸದಸ್ಯರಾದ ಶ್ರೀ ಅಪ್ಪಣ್ಣನವರು ಮತ್ತು ಇನ್ನಿತರ ಮಾನ್ಯ ಸದಸ್ಯರುಗಳು ಈ ಸಭೆಯ ಮುಂದೆ ತಂದ ನಿರ್ಣಯವನ್ನು ಸರ್ಕಾರ ಸ್ವಾಗತಿಸುತ್ತದೆ. ಹೊಸಪೇಟೆ ಉಕ್ಕಿನ ಕಾರ್ಖಾನೆ ವಿಚಾರದಲ್ಲಿ ಈಗಾಗಲೇ ಇವತ್ತು ಮಾಡಿದಂತಹ ಚರ್ಚೆಗೆ ಮೊದಲೇ ಸಾಕಷ್ಟು ಚರ್ಚೆ ಇಲ್ಲಿ ಆಗಿದೆ. ಈ ಸಂದರ್ಭದಲ್ಲಿ ಮಾನ್ಯ ಸದಸ್ಯರ ಅವಗಾಹನೆಗೆ ಎರಡು ಮಾತುಗಳನ್ನು ಹೇಳಲಿಕ್ಕೆ ಬಯಸುತ್ತೇನೆ. ನಾಲ್ಕನೇ ಪಂಚವಾರ್ಷಿಕ ಯೋಜನೆಯಲ್ಲಿ ಒಟ್ಟು ಉಕ್ಕಿನ ಉತ್ಪಾದನೆಯ ಗುರಿ 16ರಿಂದ 17 ಮಿಲಿಯ ಟನ್ ಎಂದು ಇಟ್ಟುಕೊಳ್ಳಲಾಗಿದೆ. ಇದರಲ್ಲಿ ಈಗಾಗಲೇ ಸ್ಥಾಪನೆಯಾಗಿರುವ ಉಕ್ಕಿನ ಕಾರ್ಖಾನೆಗಳನ್ನು ಇನ್ನಷ್ಟು ಅಭಿವೃದ್ಧಿಗೊಳಿಸಿ ಮತ್ತು ಹೊಸದಾಗಿ ಐದನೇ ಉಕ್ಕಿನ ಕಾರ್ಖಾನೆ ಸ್ಥಾಪನೆ ಮಾಡಿ ಈ ಗುರಿ ಸಾಧಿಸಬೇಕೆಂದು ಹೇಳಿ ಕೇಂದ್ರ ಸರ್ಕಾರ ಯೋಚನೆ ಮಾಡಿದೆ. ಈಗ ಐದನೇ ಕಾರ್ಖಾನೆಯನ್ನು ಎಲ್ಲಿ ಸ್ಥಾಪನೆ ಮಾಡಬೇಕೆಂದು ಹೇಳುವ ವಿಚಾರದಲ್ಲಿ ಬಹಳಷ್ಟು ಬಿನ್ನಾಭಿಪ್ರಾಯ ಇದೆ. ಇದರಲ್ಲಿ ಮುಖ್ಯವಾಗಿ ನಾಲ್ಕು ರಾಜ್ಯ ಸರ್ಕಾರಗಳು ಆಸಕ್ತಿ ವಹಿಸಿವೆ. ಅದು ಮೈಸೂರು ಸರ್ಕಾರದ್ದು, ಮದ್ರಾಸ್ ಸರ್ಕಾರದ್ದು, ಗೋವಾ ಸರ್ಕಾರದ್ದು ಮತ್ತು ಆಂಧ್ರ ಸರ್ಕಾರದ್ದು. ಇದರ ಜೊತೆಗೆ ಮಧ್ಯಪ್ರದೇಶದ ಸರ್ಕಾರ ಕೂಡ, ಈ ನಾಲ್ಕು ರಾಜ್ಯಗಳಲ್ಲಿ ಯಾವ ಸ್ಥಾನದಲ್ಲಿ ಉಕ್ಕಿನ ಕಾರ್ಖಾನೆ ಸ್ಥಾಪನೆ ಮಾಡಿದರೆ ಒಳ್ಳೆಯದೆಂದು ಹೇಳಲಾಗಿತ್ತೋ, ಅದಕ್ಕಿಂತ ಉತ್ತಮವಾದ ಸ್ಥಾನ ಮಧ್ಯಪ್ರದೇಶದ ಬಾಲಾಡಿಲಾ ಎಂದು ವಾದ ಹೂಡಿದೆ. ಐದನೇ ಉಕ್ಕಿನ ಕಾರ್ಖಾನೆ ವಿಚಾರದಲ್ಲಿ ಎರಡು ಕಮಿಟಿಗಳನ್ನು ಕೇಂದ್ರ ಸರ್ಕಾರದವರು ಮಾಡಿದರು. ಮೊದಲನೆಯದು Feasibility Report ತಯಾರು ಮಾಡಲಿಕ್ಕೆ ದಸ್ತೂರ್ ಅಂಡ್ ಕಂಪನಿ ಅವರಿಗೆ ಜವಾಬ್ದಾರಿ ವಹಿಸಿದರು ಮತ್ತು ಆ ಕಂಪನಿಯವರು ಹೊಸಪೇಟೆ ಪರವಾಗಿ ತಮ್ಮ ವರದಿಯನ್ನು ಕೊಟ್ಟಿದ್ದಾರೆ. ಅದು ಆದಮೇಲೆ ಕೇಂದ್ರ ಸರ್ಕಾರದವರು Anglo-American Consortium ಎಂದು ಹೇಳತಕ್ಕ ಒಂದು ಕಂಪನಿಗೆ ಈ ಐದನೇ ಉಕ್ಕಿನ ಕಾರ್ಖಾನೆ ಯಾವ ಪ್ರದೇಶದಲ್ಲಿ ಮತ್ತು ಯಾವ ಸ್ಥಾನದಲ್ಲಿ ಸ್ಥಾಪನೆ ಮಾಡತಕ್ಕಂಥದ್ದು ಒಳ್ಳೆಯದು ಎಂದು ತೀರ್ಮಾನ ಮಾಡಲಿಕ್ಕೆ ನೇಮಿಸಿದರು. ನಮ್ಮ ಸರ್ಕಾರದವರು ಈ Anglo-American Consortium ನೇಮಕವಾಗುವ ಮೊದಲೇ, ಈ ಉಕ್ಕಿನ ಕಾರ್ಖಾನೆಯ ವಿಚಾರದಲ್ಲಿ ಸಂಪೂರ್ಣವಾದ ಅಂಕಿಅಂಶಗಳನ್ನೊಳಗೊಂಡ ಮತ್ತು ಎಲ್ಲಾ ಮಾಹಿತಿಗಳನ್ನೊಳಗೊಂಡ ಒಂದು ಪ್ರಾಜೆಕ್ಟ್ ರಿಪೋರ್ಟ್ ತಯಾರು ಮಾಡಲು ಒಂದು ತಜ್ಞರ ಕಮಿಟಿಯನ್ನು ನೇಮಕ ಮಾಡಿತ್ತು. ಆ ತಜ್ಞರ ಕಮಿಟಿ ಒಂದು ರಿಪೋರ್ಟ್ ಸಿದ್ಧಮಾಡಿತ್ತು. ಅದನ್ನು Anglo–American Consortium ಕಂಪನಿಯವರು ಇಲ್ಲಿಗೆ ಬಂದಾಗ

(ಶ್ರೀ ರಾಮಕೃಷ್ಣ ಹೆಗ್ಗಡೆ)

ಅವರಿಗೆ ಮೈಸೂರು ಸರ್ಕಾರ ಕೊಟ್ಟಿದೆ. ಕೇಂದ್ರ ಸರ್ಕಾರದವರಿಗೂ ಸಹ ಒಂದು ಕಾಪಿಯನ್ನು ಕೊಟ್ಟಿದೆ. ಈಗ ಈ ವಿಚಾರದಲ್ಲಿ ಅನಗತ್ಯವಾಗಿ ಮತ್ತು ಅಯೋಗ್ಯವಾಗಿ ಬಂದರುವ ರಾಜಕೀಯ ವಿಚಾರವನ್ನು ಪ್ರಸ್ತಾಪ ಮಾಡುವುದಿಲ್ಲ. ಹೊಸಪೇಟೆಯಲ್ಲಿಯೇ ಉಕ್ಕಿನ ಕಾರ್ಖಾನೆ ಏತಕ್ಕೆ ಆಗಬೇಕು ಮತ್ತು ಹೊಸಪೇಟೆಯಲ್ಲಿ ಉಕ್ಕಿನ ಕಾರ್ಖಾನೆ ಸ್ಥಾಪನೆ ಮಾಡಲಿಕ್ಕೆ ಯಾವ ದೃಷ್ಟಿಯಿಂದ ಸೂಕ್ತವಾದ ಸ್ಥಳವಾಗಿದೆ ಎನ್ನುವುದನ್ನು ಎರಡು ಮಾತುಗಳಲ್ಲಿ ಹೇಳಬೇಕೆಂದಿದ್ದೇನೆ. ಈ ಉಕ್ಕಿನ ಕಾರ್ಖಾನೆ ಸ್ಥಾಪನೆ ಮಾಡುವಾಗ ನಾವು ಗಣನೆಗೆ ತೆಗೆದುಕೊಳ್ಳಬೇಕಾದಂಥ ಅತಿ ಮುಖ್ಯವಾದಂಥ ಅಂಶ ಅದರ ವೆಚ್ಚ, ಅದರ ಜೊತೆಗೆ ಅಷ್ಟೇ ಪ್ರಾಮುಖ್ಯವಾದಂಥ ಅದಕ್ಕೆ ಬೇಕಾದಂಥ ಕಚ್ಚಾ ಸಾಮುಗ್ರಿಗಳು ಎಷ್ಟು ಪ್ರಮಾಣದಲ್ಲಿ ಯಾವ ಬೆಲೆಗೆ ಎಷ್ಟು ಹತ್ತಿರದಲ್ಲಿ ಸಿಗುತ್ತದೆ ಎನ್ನುವುದು. ಈಗ ಹೊಸಪೇಟೆಯಲ್ಲಿ ಈ ಕೆಳಗೆ ಹೇಳಬೇಕಾದಂತಹ ಮುಖ್ಯವಾದಂಥ ಸಂಗತಿಗಳನ್ನು ನಾವು ಗಮನದಲ್ಲಿಟ್ಟುಕೊಳ್ಳಬೇಕಾದುದು ಅಗತ್ಯ. ಇಲ್ಲಿ ಅತ್ಯಂತ ಉತ್ಕೃಷ್ಟವಾದ ದರ್ಜೆಯ ಕಬ್ಬಿಣದ ಅದುರು ಅಪರಿಮಿತವಾದ ಪ್ರಮಾಣದಲ್ಲಿ ಸಿಗುತ್ತದೆ. ಎಲ್ಲಿ ಬಾಕ್ಸೈಟ್ ಇದೆ ಎಂದು ತೀರ್ಮಾನ ಮಾಡಿದೆಯೋ ಅದಕ್ಕೆ ಸುತ್ತಮುತ್ತ ಮೈಲಿಗಟ್ಟಲೆ ದೂರ ಹೋಗಬೇಕಾಗಿಲ್ಲ, ಅಷ್ಟು ಸಮೀಪದಲ್ಲಿ ಅಪಾರವಾದಂಥ ಕಬ್ಬಿಣದ ಅದುರು ಅಲ್ಲಿ ಅಡಗಿದೆ. ಎರಡನೆಯದಾಗಿ Limestone for treatment mainly for Steel and Manganese ore in suitable quantity and quality within easy economic reach ; ಮೂರನೆಯದಾಗಿ The reserves of both ore and other materials permit future expansion and development to any degree necessary. In common with all locations in South India coal has to be obtained from North India from Bengal and Madhya Pradesh or by import from abroad.

12-30 P.M.

ಯಾವುದೇ ಸ್ಥಾನದಲ್ಲಿ ಉಕ್ಕಿನ ಕಾರ್ಖಾನೆಯನ್ನು ಲೋಕೇಟ್ ಮಾಡುವುದನ್ನು ನಿರ್ಧರಿಸಿದರೂ ಎಲ್ಲಾ ಸ್ಥಾನಗಳಿಗೆ ಸರಿಯೆಂದು ಅನ್ವಯಿಸತಕ್ಕ ಕಾರ್ಖಾನೆ ಇದು. ಈ ದೃಷ್ಟಿಯಿಂದ ನೋಡಿದರೆ ಮತ್ತು ನಮ್ಮ ತಜ್ಞರ ಸಮಿತಿಯವರು ಮಾಡಿದಂಥ ಪ್ರಾಜೆಕ್ಟ್ ರಿಪೋರ್ಟ್ ದೃಷ್ಟಿಯಿಂದ ನೋಡಿದರೆ ಹೊಸಪೇಟೆಯಲ್ಲಿ ಉಕ್ಕಿನ ಕಾರ್ಖಾನೆಯನ್ನು ಸ್ಥಾಪಿಸಿದರೆ ಒಳ್ಳೆಯದು ಎಂದು ಸ್ಪಷ್ಟವಾಗುತ್ತದೆ. ಈಗ ಸದ್ಯಕ್ಕೆ ಕೇಂದ್ರ ಸರ್ಕಾರದ ಮುಂದೆ ವಿಶಾಖಪಟ್ಟಣ ಮತ್ತು ಗೋವಾಗಳಲ್ಲಿ ಈ ಕಾರ್ಖಾನೆಯನ್ನು ಸ್ಥಾಪನೆಮಾಡಬೇಕೆಂಬ ವಿಚಾರವಿದೆ. ಈ ಮೂರು ವಿಷಯಗಳನ್ನು ತುಲನಾತ್ಮಕದೃಷ್ಟಿಯಿಂದ ನೋಡಿದರೆ ಹೊಸಪೇಟೆಯಲ್ಲಿ ಉಕ್ಕಿನ ಕಾರ್ಖಾನೆ ಅತಿ ಕಡಿಮೆ ಖರ್ಚಿನಿಂದ ಆಗುತ್ತದೆಂದು ನಿರ್ವಿವಾದವಾಗಿ ಹೇಳುತ್ತೇನೆ. ಶ್ರೀಮಾನ್ ವೆಂಕಟೇಗೌಡರು ಕಂಪಾರಿಟಿವ್ ಫಿಗರ್ಸನ್ನು ತಮ್ಮ ಭಾಷಣದಲ್ಲಿ ಪ್ರಸ್ತಾಪಿಸಿದರು. ನಾನು ಅದನ್ನು ಪುನಃ ಸಭೆಯ ಅವಗಾಹನೆಗೆ ತರಲು ಬಯಸುತ್ತೇನೆ. ಗೋವಾದಲ್ಲಿ ಈ ಕಾರ್ಖಾನೆಯನ್ನು ಸ್ಥಾಪನೆ ಮಾಡಿದರೆ ನೂರಕ್ಕೆ ನೂರು ಇಂಪೋರ್ಟೆಡ್ ಕೋಲ್ ಮೇಲೆ ಅವಲಂಬಿಸಬೇಕಾಗಿದೆ. ಏಕೆಂದರೆ ಇಂಡಿಜನಸ್ ಕೋಲ್ ಸಿಗುವುದು ಬಹಳ ದೂರ. ಅದು ಅಷ್ಟೊಂದು ಪ್ರಾಕ್ಟಿಕಲ್ ಆಗುವುದಿಲ್ಲ. ಆ ಒಂದು ಆಧಾರದ ಮೇಲೆ ಬೆಲೆಯನ್ನು ಲೆಕ್ಕ ಹಾಕಿದರೆ ಒಂದು ಟನ್ ಫಿನಿಷ್ಡ್ ಸ್ಟೀಲ್ ಫ್ಲ್ಯಾಟ್ ಷೀಟಿಗೆ 320 ರೂಪಾಯಿಗಳಾಗುತ್ತದೆ. ಲೈಟ್ ಅಂಡ್ ಮಿಡಿಯಂ ಪ್ಲೇಟುಗಳಿಗೆ 360 ರೂಪಾಯಿಗಳು ಬೀಳುತ್ತದೆ. ಇನ್ನು ವಿಶಾಖಪಟ್ಟಣದಲ್ಲಿ ಉಕ್ಕಿನ ಕಾರ್ಖಾನೆಯನ್ನು ಸ್ಥಾಪಿಸಿದರೆ ಶೇಕಡ 50ರಷ್ಟು ಇಂಪೋರ್ಟೆಡ್ ಕೋಲ್ ಬೇಕಾಗುತ್ತದೆ. ಇನ್ನುಳಿದ ಶೇಕಡ 50ರಷ್ಟು ನಮ್ಮಲ್ಲಿಯೇ ಸಿಗುವುದು. ಇದರ ಒಂದು ಆಧಾರದ ಮೇಲೆ ಇದನ್ನು ಮಾಡಿದರೆ ಫ್ಲಾಟ್ ಷೀಟ್ಸ್‌ಗೆ 330 ರೂಪಾಯಿಗಳಾಗುತ್ತದೆ. ಲೈಟ್ ಅಂಡ್ ಮಿಡಿಯಂ ಪ್ಲೇಟುಗಳಿಗೆ 360 ರೂಪಾಯಿಗಳು ಬೀಳುತ್ತದೆ. ಇನ್ನು ಹೊಸಪೇಟೆಯಲ್ಲಿ ಉಕ್ಕಿನ ಕಾರ್ಖಾನೆಯನ್ನು ಸ್ಥಾಪನೆ ಮಾಡಿದರೆ ವೆಚ್ಚ 316 ರೂಪಾಯಿಗಳು ಮತ್ತು 351 ರೂಪಾಯಿಗಳಷ್ಟು ಬೀಳುತ್ತದೆ. ಆದ್ದರಿಂದ ಈಗ ಹೊಸಪೇಟೆ ಯಾವ ಯಾವ ದೃಷ್ಟಿಯಿಂದ ನೋಡಿದರೂ ಉಕ್ಕಿನ ಕಾರ್ಖಾನೆಯನ್ನು ಸ್ಥಾಪನೆ ಮಾಡುವುದಕ್ಕೆ ಆದರ್ಶವಾದಂಥ ಸ್ಥಾನವಾಗಿದೆ. ಅಲ್ಲಿ ಉಕ್ಕಿನ ಕಾರ್ಖಾನೆಯನ್ನು ಸ್ಥಾಪನೆ ಮಾಡುವುದಕ್ಕೆ ಸರಿಯಾದ ಸ್ಥಳ ಎಂಬುದನ್ನು ಯಾರು ಯಾರಿಗೆ ಬೇಕಾದರೂ ಇಲ್ಲಿ ಸಿದ್ಧಾಂತ ಮಾಡಿಕೊಡಬಹುದು. ಈಗ ಈ ವಿಚಾರದಲ್ಲಿ ರಾಜಕೀಯ ಬಂದಿದೆ ಎಂದು ಕೆಲವು ಸದಸ್ಯರು ಹೇಳಿದರು. ದುರ್ದೈವದಿಂದ ರಾಜಕೀಯ ವಿಚಾರ ಇಲ್ಲಿ ಬಂದಿದೆ. ನಾನು ಮೊನ್ನೆ ಇದೇ ವಿಚಾರ ವಿಧಾನ ಪರಿಷತ್ತಿನಲ್ಲಿ ಬಂದಾಗ್ಗೆ ಒಂದು ಮಾತನ್ನು ಹೇಳಿದೆ. ಅದನ್ನು ಇಲ್ಲಿ ಪುನಃ

ಹೇಳಿದರೆ ತಪ್ಪಾಗಲಿಕ್ಕಿಲ್ಲ. ದಕ್ಷಿಣ ಭಾರತದಲ್ಲಿ 5ನೇ ಉಕ್ಕಿನ ಕಾರ್ಖಾನೆ ಸ್ಥಾಪನೆಯಾಗಬೇಕೆನ್ನುವ ವಿಚಾರ ಅನೇಕ ವರ್ಷಗಳಿಂದ ಕೇಂದ್ರ ಸರ್ಕಾರದವಲ್ಲಿದೆ. ಇಲ್ಲಿ ಒಂದು ತರಹ ಅಭಿಪ್ರಾಯ ಜನತೆಯಲ್ಲಿ ಏನು ಮೂಡಿದೆಯೆಂದು ಹೇಳಿದರೆ ಮಾನ್ಯ ಸದಸ್ಯರಿಗೆ ಅರ್ಥವಾಗುತ್ತದೆ. ಆ ರೀತಿ ಮಾಡಲಿಕ್ಕೆ ಕೇಂದ್ರ ಸರ್ಕಾರದ ಆಯಾ ಕಾಲದ ಮಂತ್ರಿಗಳೇ ಕಾರಣರಾಗಿದ್ದಾರೆಂದು ಹೇಳಿದರೆ ತಪ್ಪಾಗುವುದಿಲ್ಲ. ಶ್ರೀಮಾನ್ ಸುಬ್ರಹ್ಮಣ್ಯಂ ಅವರು ಉಕ್ಕಿನ ಮಂತ್ರಿಗಳು ಆಗಿದ್ದಾಗ ಸೇಲಂನಲ್ಲಿ ಉಕ್ಕಿನ ಕಾರ್ಖಾನೆ ಸ್ಥಾಪನೆಮಾಡಬೇಕೆಂದು ಪ್ರಯತ್ನಪಟ್ಟರು. ಆಗಲೇ ಸೇಲಂನಲ್ಲಿ ಉಕ್ಕಿನ ಕಾರ್ಖಾನೆ ಆಗಿಬಿಡುತ್ತದೋ ಏನೋ ಎಂಬುದಾಗಿ ಹೇಳುವ ಒಂದು ಭಾವನೆ ಜನರಲ್ಲಿ ಮೂಡಿತ್ತು. ಅವರ ನಂತರ ನೀಲಂ ಸಂಜೀವರೆಡ್ಡಿಯವರು ಉಕ್ಕಿನ ಮಂತ್ರಿಗಳು ಆದಮೇಲೆ ಸೇಲಂ ವಿಚಾರ ಹೋಯಿತು, ಹೊಸಪೇಟೆ ವಿಚಾರವೂ ಹೋಯಿತು, ವಿಶಾಖಪಟ್ಟಣದ ವಿಷಯ ಪ್ರಾಮುಖ್ಯವಾಗಿ ಬರಲಿಕ್ಕೆ ಷುರುವಾಯಿತು. ಇದರಿಂದ ಏನೊಂದು ಅಭಿಪ್ರಾಯ ಜನರಲ್ಲಿ ಮೂಡುತ್ತಿದೆಯೆಂದರೆ, ಯಾವ್ಯಾವ ಪ್ರದೇಶದಿಂದ ಬಂದಂಥ ಮಂತ್ರಿಗಳು ಈ ಶಾಖೆಯನ್ನು ನಿರ್ವಹಿಸುತ್ತಾರೋ ಆ ರಾಜ್ಯಕ್ಕೆ ವಿಶೇಷವಾದಂಥ ಪ್ರಾಶಸ್ತ್ಯ ಸಿಗುತ್ತದೆನ್ನುವ ಅಭಿಪ್ರಾಯ ಮೂಡುತ್ತಿದೆ. ಅಲ್ಲಿ ನಮ್ಮ ಪ್ರತಿನಿಧಿ ಇಲ್ಲ, ಅದಕ್ಕೆ ಇಷ್ಟು ಕಷ್ಟವಾಗುತ್ತದೆಂದು ಹೇಳುತ್ತಾರೆ. ಇಂತಹ ಒಂದು ಅಭಿಪ್ರಾಯ ಮೂಡುವುದಕ್ಕೆ ಅವಕಾಶವನ್ನು ಮಾಡಿಕೊಟ್ಟದ್ದು ನಿಜವಾಗಿ ದುರ್ದೈವ. ಶ್ರೀಮಾನ್ ಗೋಪಾಲ ಗೌಡರು ಮತ್ತು ಅಣ್ಣಾರಾವ್ ಅವರು ಹೇಳಿದ ಹಾಗೆ ಇದು ಯಾವುದೇ ಒಂದು ರಾಜ್ಯದ ಅಥವಾ ಯಾವುದೇ ಒಂದು ಸಣ್ಣ ಪ್ರದೇಶದ ದೃಷ್ಟಿಯಿಂದ ನೋಡತಕ್ಕ ವಿಚಾರವಲ್ಲ. ಉಕ್ಕಿನ ಕಾರ್ಖಾನೆ ಕೇವಲ 18, 20, 30, 50 ಕೋಟಿ ರೂಪಾಯಿಗಳಿಂದ ಆಗತಕ್ಕ ಕೆಲಸವಲ್ಲ. ಅದಕ್ಕೆ ಒಂದು ಸಣ್ಣ ಇಕನಾಮಿಕ್ ಯೂನಿಟ್ ಮಾಡಿದರೂ ಕನಿಷ್ಠಪಕ್ಷ 1.5 ಮಿಲಿಯನ್ ಟನ್ನುಗಳಷ್ಟು ಕೆಪಾಸಿಟಿ ಆಗಬೇಕು. ಅದಕ್ಕಾಗಿ 350 ಕೋಟಿ ರೂಪಾಯಿಗಳಿಗಿಂತ ಹೆಚ್ಚು ಖರ್ಚಾಗುತ್ತದೆ. ಇದರ ಅಲ್ಟಿಮೇಟ್ ಕೆಪಾಸಿಟಿ 4ರಿಂದ 5 ಮಿಲಿಯನ್‌ವರೆಗೆ ಏರಿಸುವ ವಿಚಾರವನ್ನು ನಾವು ಇಟ್ಟುಕೊಂಡು ಇದನ್ನು ಸ್ಥಾಪನೆ ಮಾಡಬೇಕಾಗಿದೆ. ಆದ್ದರಿಂದ ಇದಕ್ಕೆ ಅಗತ್ಯವಾದಂಥ ಹಣ ಬಹಳ ದೊಡ್ಡದು ಇದೆ. ಇದು ಯಾವುದೇ ಒಂದು ರಾಜ್ಯದ ಕೈಗಾರಿಕೆಯಾಗಿರದೆ ರಾಷ್ಟ್ರದ ಕೈಗಾರಿಕೆಯಾಗಬೇಕು. ಅಂತಹ ರಾಷ್ಟ್ರದ ಕೈಗಾರಿಕೆಯನ್ನು ಸ್ಥಾಪನೆ ಮಾಡುವಾಗ ರಾಜ್ಯದಲ್ಲಿ ಪರದೇಶದವರು ಹೇಳತಕ್ಕ ಸಂಕೀರ್ಣ ಮನೋವೃತ್ತಿಯನ್ನು ತಂದರೆ ಇಡೀ ರಾಷ್ಟ್ರಕ್ಕೆ ಅಪಚಾರವನ್ನು ಬಯಸುತ್ತಾರೆ ಎಂದು ನಾನು ಖಂಡಿತವಾಗಿ ಇಲ್ಲಿ ಹೇಳಬಯಸುತ್ತೇನೆ. ಆದ್ದರಿಂದ ಈ ವಿಚಾರದಲ್ಲಿ ನಿಷ್ಪಕ್ಷಪಾತವಾದ ದೃಷ್ಟಿ, ರಾಷ್ಟ್ರೀಯ ದೃಷ್ಟಿಗಳಿಂದ ಯಾವ ಜಾಗದಲ್ಲಿ ಐದನೇ ಉಕ್ಕಿನ ಕಾರ್ಖಾನೆಯನ್ನು ಸ್ಥಾಪಿಸಿದರೆ ಅತಿ ಕಡಿಮೆ ವೆಚ್ಚದಲ್ಲಿ ಮತ್ತು ಹೆಚ್ಚು ಪ್ರಯೋಜನಕಾರಿಯಾಗಿ ಆಗುವುದಕ್ಕೆ ಸಾಧ್ಯವೋ ಆ ಜಾಗದಲ್ಲಿ ಇದನ್ನು ಸ್ಥಾಪನೆ ಮಾಡಬೇಕೆಂದು ನಾವು ಕೇಂದ್ರ ಸರ್ಕಾರದವರನ್ನು ಪುನಃ ಪುನಃ ಆಗ್ರಹಪೂರ್ವಕವಾಗಿ ಕೇಳಿದ್ದೇವೆ. ನಮ್ಮ ಮುಖ್ಯ ಮಂತ್ರಿಗಳು ಈ ಒಂದು ಸ್ಟೀಲ್ ಪ್ಲಾಂಟ್ ಜೊತೆಗೆ ಸಣ್ಣ ಸಣ್ಣ ಪ್ರಮಾಣದ ಮೂರು ಸ್ಟೀಲ್ ಪ್ಲಾಂಟುಗಳನ್ನು ಕೊಡಿ ಎಂದು ಹೇಳಿದ್ದಾರೆ. ಇದರ ಔಚಿತ್ಯವೇನೆಂಬುದಾಗಿ ಶ್ರೀ ಗೋಪಾಲಗೌಡರು ಪ್ರಶ್ನೆ ಮಾಡಿದರು. ಮುಖ್ಯ ಮಂತ್ರಿಗಳು ಹೇಳಿದಂತಹ ಮಾತಿನಲ್ಲಿ ಔಚಿತ್ಯವಿದೆ. ಏಕೆಂದರೆ, ಇಂದು ಈ ವಿಚಾರ ಕೇವಲ ಆರ್ಥಿಕ ವಿಚಾರವಾಗಿ ಉಳಿಯದೆ ರಾಜಕೀಯ ವಿಚಾರವಾಗಿ ಬಹಳಮಟ್ಟಿಗೆ ಪರಿವರ್ತಿತವಾಗಿರುವುದರಿಂದ ಜನರಲ್ಲಿ ಕ್ಷೋಭೆ, ಮತ್ತು ಅಸಮಾಧಾನ ಬಹಳ ವೇಗವಾಗಿ ಹಬ್ಬುತ್ತಾ ಇದೆ. ಈ ಮೂರು ಸ್ಥಾನಗಳಲ್ಲಿ ಕಬ್ಬಿಣದ ಅದುರು ಹೇರಳವಾಗಿ ಸಿಕ್ಕುತ್ತಿದೆ. ಈ ಉಕ್ಕಿನ ಕಾರ್ಖಾನೆ ಸ್ಥಾಪನೆಗೆ ಬೇಕಾಗಿರುವುದು ಬಹಳ ಮಟ್ಟಿನ ಅನುಕೂಲತೆಗಳು. ಈ ಮೂರು ಸ್ಥಾನಗಳಲ್ಲಿ ಚಿಕ್ಕ ಚಿಕ್ಕ ಪ್ರಮಾಣದ ಉಕ್ಕಿನ ಕಾರ್ಖಾನೆಯನ್ನು ಪ್ರಾರಂಭ ದೆಸೆಯಲ್ಲಿ ಷುರು ಮಾಡಿ ಆಮೇಲೆ ಅದನ್ನು ಅಭಿವೃದ್ಧಿ ಪಡಿಸಬೇಕೆಂಬ ಸೂಚನೆಯನ್ನು ಅವರು ಮಾಡಿದರು. ಇದು ಕೇವಲ ಒಬ್ಬ ರಾಜಕೀಯ ನೀತಿಜ್ಞರ ಮಾತಲ್ಲ. ತಜ್ಞರು ಅದನ್ನು ವಿಚಾರ ಮಾಡುತ್ತಾರೆ. ಇದನ್ನು ಆರ್ಥಿಕದೃಷ್ಟಿಯಿಂದ ವ್ಯವಹಾರ ಮಾಡುವುದಾದರೆ ಒಪ್ಪಿಕೊಳ್ಳುವುದರಲ್ಲಿ ಯಾವುದೇ ರೀತಿಯ ಆಕ್ಷೇಪಣೆ ಇರಬಾರದೆಂದು ನಾನು ಭಾವಿಸುತ್ತೇನೆ. ಮಾನ್ಯ ಅಧ್ಯಕ್ಷರೇ, ಕೆಲವು ಜನ ಸದಸ್ಯರು ಆಂಧ್ರದಲ್ಲಿ ಈ ಉಕ್ಕಿನ ಕಾರ್ಖಾನೆಯ ವಿಷಯವಾಗಿ ನಡೆದ ಚಳುವಳಿಯಲ್ಲಿ ಬಗ್ಗೆ ಆಂಧ್ರದ ಕೆಲವು ಮಾನ್ಯ ಮಂತ್ರಿಗಳು ಈ ವಿಚಾರದಲ್ಲಿ ಕೇಂದ್ರ ಸರ್ಕಾರದಲ್ಲಿ ಇನ್ನೂ ಇತರ ಸಂಬಂಧಪಟ್ಟ ಜನಗಳ ಮೇಲೆ ಪ್ರಭಾವ ಮತ್ತು ಒತ್ತಾಯವನ್ನು ತರತಕ್ಕಂತೆ ಮಾಡಿದ್ದ ಪ್ರಯತ್ನದ ಬಗ್ಗೆ ಟೀಕೆಯನ್ನು ಮಾಡಿದ್ದಾರೆ. ನಾನು ಒಂದು ಮಾತು ಮಾತ್ರ ಹೇಳಬಲ್ಲೆ. ಅದು ಏನೆಂದರೆ, ಯಾವುದೇ ಆರ್ಥಿಕ ವಿಚಾರದ ಬಗ್ಗೆ ಚಳವಳಿ, ವಿಧ್ವಂಸಕ ವೃತ್ತಿ ಮತ್ತು ಜನತೆಯ ಮನಸ್ಸನ್ನು ಕ್ಷೋಭಗೊಳಿಸಿ ಅವರ ಪ್ರಭಾವವನ್ನು ಕೇಂದ್ರ ಸರ್ಕಾರದ ಮೇಲೋ ಅಥವಾ ಇನ್ನು ಇತರ ಸಂಬಂಧಪಟ್ಟ ಸಂಸ್ಥೆಯ ಮೇಲೊ ಹರಿಸಿ ಕೆಲಸಗಳನ್ನು ಮಾಡತಕ್ಕದ್ದು ಸರ್ವಥಾ ಒಳ್ಳೆಯದಲ್ಲ. ಅದು ಅತ್ಯಂತ ಅಸಾಧುವಾದ ಪ್ರಯತ್ನ ಎಂದು ಹೇಳಲಿಕ್ಕೆ ಬಯಸುತ್ತೇನೆ.

ಒಬ್ಬ ಸದಸ್ಯರು.—ಆಂಧ್ರದವರಿಗೆ ತಾವು ಯಾತಕ್ಕೆ ಅಡ್ವೈಸ್ ಮಾಡಬಾರದು ?

ಶ್ರೀ ರಾಮಕೃಷ್ಣ ಹೆಗ್ಗಡೆ.—ಆಂಧ್ರದವರಿಗೆ ಅಡ್ವೈಸ್ ಮಾಡುವ ಶಕ್ತಿ ನನಗೆ ಇಲ್ಲ. ಆಂಧ್ರದವರು ಈ ವಿಚಾರದಲ್ಲಿ ಯಾವ ಕ್ರಮವನ್ನು ಕೈಕೊಂಡಿದ್ದಾರೆ ಅದೇ ತರಹ ಕ್ರಮವನ್ನು ಇನ್ನಷ್ಟು ಉಗ್ರವಾದ ರೂಪದಲ್ಲಿ ನಮ್ಮ ಜನರು ಕೈಕೊಳ್ಳಬಲ್ಲರು. ಆದರೆ ನಮ್ಮ ಜನರ ಸಂಸ್ಕೃತಿ ಮತ್ತು ನಮ್ಮ ಜನರ ಮನೋವೃತ್ತಿ ಇವು ಇನ್ನೂವರೆಗೆ ಆ ತರಹ ಕೆಲಸವನ್ನು ಮಾಡಲಿಕ್ಕೆ ಬಿಟ್ಟಿಲ್ಲ, ಅದಕ್ಕಾಗಿ ನಮಗೆ ಅಸಮಾಧಾನ ಇಲ್ಲ. ಈಗ ದುರ್ಧೈರ್ವದಿಂದ ನಮ್ಮ ದೇಶದಲ್ಲಿ ಯಾವ ಕೆಲಸವನ್ನು ಮಾಡಿಕೊಳ್ಳಬೇಕಾದರೂ, ಈ ತರಹ ಒಂದು ಚಳವಳಾತ್ಮಕ ಕ್ರಮವನ್ನು ಕೈಗೊಳ್ಳಬೇಕಾದುದು ಒಂದು ಪವೃತ್ತಿಯಾಗಿದೆ. ಡೆಮಾಕ್ರಸಿಯಲ್ಲಿ ಇದಕ್ಕೂ ಕೂಡ ಸ್ವಲ್ಪ ಮಟ್ಟಿಗೆ ಸ್ಥಾನ ಇದೆ. ಆದರೆ ದೊಡ್ಡ ದೊಡ್ಡ ಪ್ರಾಜೆಕ್ಟ್‌ಗಳನ್ನು ದೊಡ್ಡ ದೊಡ್ಡ ಕಾರ್ಯಗಳನ್ನು ಈ ಚಳವಳಿ ಆಧಾರದ ಮೇಲೆ, ಚಳವಳಿ ಪ್ರಭಾವದಿಂದ ಪ್ರೇರಿತರಾಗಿ ಕೇಂದ್ರ ಸರ್ಕಾರವಾಗಲಿ, ಪ್ಲಾನಿಂಗ್ ಕಮೀಷನ್ ಆಗಲಿ ನಿರ್ಧಾರವನ್ನು ತೆಗೆದುಕೊಳ್ಳುವುದಾದರೆ ಆಮೇಲೆ ಅದಕ್ಕೆ ಯಾವ ಅರ್ಥ, ಯಾವ ವಿವೇಕ ಇದೆ ಎಂದು ನಾನು ಭಾವಿಸುವುದಿಲ್ಲ. ಬಂದರು ಪ್ರಶ್ನೆ ಬಂದಾಗ ಮಂಗಳೂರಿನಲ್ಲಿ ಮಾಡಬೇಕೇ ಮತ್ತೊಂದು ಕಡೆಯಲ್ಲಿ ಮಾಡಬೇಕೇ ಎನ್ನುವುದನ್ನು ಎಜಿಟೇಷನ್ ಮುಖಾಂತರ ನಿರ್ಧರಿಸುವುದು ಸಾಧ್ಯವಿಲ್ಲ. ಅದರಂತೆಯೇ ಉಕ್ಕಿನ ಕಾರ್ಖಾನೆ. ಆದುದರಿಂದ, ಕೇಂದ್ರ ಸರ್ಕಾರ ಮತ್ತು ಪ್ಲಾನಿಂಗ್ ಕಮೀಷನ್ ಈ ವಿಚಾರದಲ್ಲಿ ನಿಷ್ಪಕ್ಷಪಾತದಂಥ ರೀತಿಯಿಂದ ಯಾವುದೇ ಪ್ರಭಾವಕ್ಕೆ ಒಳಗಾಗದೆ ಯಾವುದೇ ರೀತಿಯ ಹೊರಗಿನ ಒತ್ತಾಯಕ್ಕೆ ಒಳಗಾಗದೆ ನಿರ್ಣಯ ತೆಗೆದುಕೊಳುತ್ತಾರೆ ಎಂದು ನನಗೆ ಸಂಪೂರ್ಣವಾದ ಭರವಸೆ ಇದೆ. ಶ್ರೀ ಕೃಷ್ಣರವರು ಅವರ ಭಾಷಣದಲ್ಲಿ ಒಂದು ಮಾತು ಹೇಳುತ್ತಾ, ನಮ್ಮ ಪ್ರಧಾನ ಮಂತ್ರಿಗಳಿಗೆ ಅಭಿನಂದನೆ ಕೊಟ್ಟರು. ಅದು ಏನೆಂದರೆ, ಪ್ರಧಾನ ಮಂತ್ರಿಗಳು ಈ ವಿಚಾರದಲ್ಲಿ ತಾನು ಯಾವ ರೀತಿ ಒತ್ತಾಯಕ್ಕೂ ಪ್ರಭಾವಕ್ಕೂ ಮಣಿಯುವುದಿಲ್ಲ ಎಂದು ಏನು ಹೇಳಿದ್ದಾರೆ, ಅದನ್ನು ಸ್ವಾಗತಿಸುತ್ತೇನೆ ಎಂದು ಹೇಳಿದರು. ಅವರು ಹೇಳಿದಂಥಾ ಮಾತು ನಮಗೆಲ್ಲರಿಗೂ ವಿಶೇಷ ಬಲವನ್ನು ಕೊಟ್ಟಿದೆ. ಆಂಗ್ಲೋ ಅಮೇರಿಕನ್ ಕನ್‌ಸಾರ್ಟಿಯಂರವರು ತಮ್ಮ ರಿಪೋರ್ಟಿನಲ್ಲಿ ವಿಶಾಖಪಟ್ಟಣ ಮೇಲು, ಹೊಸಪೇಟೆ ಕೀಳು ಎನ್ನತಕ್ಕ ಮಾತನ್ನು ಹೇಳಲಿಲ್ಲ. ಅದನ್ನು ಕೂಡ ಗಮನದಲ್ಲಿ ಇಡಬೇಕು. ಸಮುದ್ರದ ದಂಡೆಯಲ್ಲಿ ಉಕ್ಕಿನ ಕಾರ್ಖಾನೆ ಸ್ಥಾಪಿಸುವುದಾದರೆ, ವಿಶಾಖಪಟ್ಟಣ ಒಳ್ಳೆಯದು ಎಂದು ಅವರು ಹೇಳಿದ್ದಾರೆ ಮತ್ತು, ಒಳನಾಡಿನಲ್ಲಿ ಉಕ್ಕಿನ ಕಾರ್ಖಾನೆ ಸ್ಥಾಪಿಸುವುದಾದರೆ ಹೊಸಪೇಟೆ ಅತ್ಯುತ್ತಮ ಸ್ಥಾನ ಎಂದು ಹೇಳಿದ್ದಾರೆ. ಆದುದರಿಂದ ಕೇಂದ್ರ ಸರ್ಕಾರ ಈ ವಿಚಾರದಲ್ಲಿ ನಾವು ಹೊಸಪೇಟೆ ಬಗ್ಗೆ ಸಿದ್ಧ ಮಾಡಿದಂಥ ವರದಿಯನ್ನು ಪರ್ಯಾಲೋಚಿಸಿ, ಹೊಸಪೇಟೆಯಲ್ಲಿ ತಯಾರಾದಂಥ ಉಕ್ಕು ಅತಿ ಕಡಿಮೆ ಖರ್ಚಿನದು ಆಗುತ್ತದೆ ಎನ್ನುವ ಮಾತನ್ನು ಮನಗಂಡು, ಹೊಸಪೇಟೆಯಲ್ಲಿ ಈ ಉಕ್ಕಿನ ಕಾರ್ಖಾನೆ ಸ್ಥಾಪನೆ ಮಾಡಲಿಕ್ಕೆ ಕೊನೇ ತೀರ್ಮಾನ ಮಾಡುತ್ತಾರೆ ಎಂದು ನಾನು ಆಶೆ ಮಾಡುತ್ತೇನೆ.

ಮಾನ್ಯ ಅಧ್ಯಕ್ಷರೇ, ಈ ಒಂದು ನಿರ್ಣಯವನ್ನು ಈ ಸಭೆಯಲ್ಲಿ ಯಾರು ತಂದಿದ್ದಾರೋ ಅವರು ಮೈಸೂರಿಗೆ ಒಂದು ದೊಡ್ಡ ಸೇವೆ ಮಾಡಿದ್ದಾರೆ ಮತ್ತು ಇದರ ಮೂಲಕ ಸರ್ಕಾರದ ಕೈಯನ್ನು ಇನ್ನಷ್ಟು ಬಲಗೊಳಿಸಿದ್ದಾರೆ ಎಂದು ನಾನು ತಿಳಿದುಕೊಂಡಿದ್ದೇನೆ ಮತ್ತು ಇದಕ್ಕಾಗಿ ಅವರನು ಅಭಿನಂದಿಸುತ್ತೇನೆ. ಈ ಮಾತುಗಳೊಂದಿಗೆ ನಾನು ಈ ನಿರ್ಣಯವನ್ನು ಸ್ವಾಗತಿಸುತ್ತೇನೆ.

Mr. SPEAKER.—I shall put the Resolution to the vote of the House. The question is:

> "That this Assembly strongly urges on the Government of India that the V Steel Plant be located at Hospet, in Mysore State."

The motion was adopted unanimously.

PAPERS LAID ON THE TABLE

† **Sri S. R. KANTHI** (Minister for Education).—Sir, I beg to inform the House that the Report of the Committee to examine the administration of schools at the district level has been circulated to Members. To-day it may be collected from the pigeonholes.